ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್-2017
ಬೆಲೆ ರೂ. 1



## ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮದಲ್ಲಿ ಕನ್ನಡದ ಪ್ರತಿಭೆಗಳು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 11
ಆಗಸ್ಟ್ 2017, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ಕನ್ನಡವೊಂದು ಪ್ರಾದೇಶಿಕ ಭಾಷೆಯೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡರೂ ಅದೊಂದು ಅಭಿಜಾತ ಭಾಷೆಯಾಗಿ ಗುರುತಿಸಿಕೊಂಡಿದೆ. ಕನ್ನಡದ ಸಾಹಿತ್ಯ ಪರಂಪರೆಯು ಒಂದು ಸಹಸ್ರಮಾನಗಳಿಗಿಂತಲೂ ಹಿಂದಿನದು ಎಂಬುದು ಕೂಡಾ ರುಜುವಾಗಿದೆ. ಕನ್ನಡದ ಮೊದಲ ಕೃತಿಯೆಂದು ಕರೆಯಲಾಗುವ ಶ್ರೀವಿಜಯನ ಕವಿರಾಜ ಮಾರ್ಗಂ ಈಗ ಜಗತ್ತಿಗೆ ಪರಿಚಯವಾಗುತ್ತಿದೆ. ಎಂದೋ ಆಗಬೇಕಿದ್ದ ಕಾರ್ಯವನ್ನು ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಮಾಡುತ್ತಿರುವುದು ಅಭಿನಂದನೀಯವಾಗಿದೆ. ಕನ್ನಡದ ಕವಿರಾಜ ಮಾರ್ಗಂವನ್ನು ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಇಬ್ಬರು ವಿದ್ವಾಂಸರಾದ ಆರ್.ವಿ.ಎಸ್. ಸುಂದರಂ ಮತ್ತು ದೇವೆನ್ ಎಂ. ಪಟೇಲ್ ಅವರು ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. ಐತಿಹಾಸಿಕವಾಗಿ ಮಹತ್ತರವಾದ ಈ ಕೃತಿಯ ಬಿಡುಗಡೆಯು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಸಪ್ಟಂಬರ್ ಮೂರರಂದು ನಡೆಯಲಿದೆ. ಇದಲ್ಲದೇ ಕನ್ನಡ ಅಧ್ಯಯನ ಪೀಠವು ಅರವತ್ತು ತುಳು ಜನಪದ ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ 'ದ ರೈನ್ ಬಾಯ್' ಕೃತಿಯನ್ನು ನವದೆಹಲಿಯ ಮನೋಹರ ಪಬ್ಲಿಕೇಷನ್ ಜತೆಗೆ ಪ್ರಕಟಿಸಿತ್ತಿದೆ. ಈ ಕೃತಿಗಳು ಎರಡು ದ್ರಾವಿಡಭಾಷೆಗಳ ವೈವಿಧ್ಯತೆ, ವಿದ್ವತ್ತು ಮತ್ತು ಮಹತ್ವವನ್ನು ಜಾಗತಿಕ ಓದುಗರಿಗೆ ನೀಡಲಿದೆ. ಈ ಯೋಜನೆ ಮುಂದೆ ಕನ್ನಡದ ಹಲವಾರು ಕೃತಿಗಳು ಅನುವಾದಗೊಳ್ಳಲು ಅಡಿಪಾಯವಾಗಲಿದೆ ಎಂದು ಕೊಂಡಿದ್ದೇವೆ. ಈ ಕಾರ್ಯಯೋಜನೆಗಳ ಹಿಂದೆ ಅತ್ಯಂತ ಮುತುವರ್ಜಿಯಿಂದ ಕೆಲಸ ಮಾಡಿದ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆಯವರ ದೂರದರ್ಶಿತ್ವ, ಕಠಿಣ ಪರಿಶ್ರಮ ಮತ್ತು ಕ್ರಿಯಾಶೀಲತೆಗೆ ಕನ್ನಡಿಗರೆಲ್ಲರೂ ಮಣಿಯಲೇ ಬೇಕು.

ಕನ್ನಡವನ್ನು ಕನ್ನಡೇತರರಿಗೆ ಪರಿಚಯಿಸಿ ವಿವಿಧ ಭಾಷೆಗಳ ಜತೆಗೆ ಸೌಹಾರ್ದತೆ ಮತ್ತು ಕೊಡುಕೊಳ್ಳುವಿಕೆಯನ್ನು ಬೆಳೆಸುವ ಜವಾಬ್ದಾರಿ ದೇಶದ ರಾಜಧಾನಿಯಲ್ಲಿರುವ ಕನ್ನಡಿಗರಾದ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘದ ಮೂಲಕ ಕೆಲವೊಂದು ಸಣ್ಣ ಹೆಜ್ಜೆಗಳನ್ನು ಇಡಲು ಪ್ರಯತ್ನಿಸಲಾಗಿದೆ. ಸಂಘದ ಮಾಜಿ ಅಧ್ಯಕ್ಷ ಐ. ರಾಮಮೋಹನ ರಾವ್ ಅವರ ನೆನಪು ನಮನ ಕಾರ್ಯಕ್ರಮದಲ್ಲಿ ಸಂಘವು ಆಯೋಜಿಸಿದ 'ಸಾಂಸ್ಕೃತಿಕ ನಮನ' ಕಾರ್‍ಯಕ್ರಮವೂ ಕನ್ನಡ ಸಾಹಿತ್ಯವನ್ನು ಕನ್ನಡೇತರರಿಗೆ ಪರಿಚಯಿಸುವ ಕಾರ್ಯಕ್ರಮವಾಗಿತ್ತು. ಕನ್ನಡದ ಹೆಸರಾಂತ ಗಾಯಕಿ ರಮ್ಯ ವಶಿಷ್ಟ ಅವರು ಕನ್ನಡದ ಸಮೃದ್ಧ ಸಾಹಿತ್ಯ ಪರಂಪರೆಯಾದ ವಚನಗಳು, ದ.ರಾ.ಬೇಂದ್ರೆಯವರ ನಾಕು ತಂತಿಯ ಮೊದಲಾದ ಹಾಡುಗಳ ಮೂಲಕ ಮೂಲಕ ಕನ್ನಡೆತರರನ್ನು ತಲುಪಲು ಪ್ರಯತ್ನಿಸಿದರು. ಉರ್ದು, ಹಿಂದಿ ಮತ್ತು ಪಂಜಾಬಿಯಲ್ಲಿರುವ ಗಝಲ್ ಮತ್ತು ಸೂಫಿ ಹಾಡುಗಳು ಮತ್ತು ಕನ್ನಡ ಸಾಹಿತ್ಯದಲ್ಲಿರುವ ಸತ್ವವನ್ನು ಎಲ್ಲರಿಗೂ ತಿಳಿಸಿದರು. ಇಂತಹ ಪ್ರಕಾರಗಳ ಮೂಲಕ ನಾವು ನಮ್ಮ ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಪತ್ತನ್ನು ಕನ್ನಡೇತರರಿಗೆ ಅತಿ ಸುಲಭದಲ್ಲಿ ತಲುಪಿಸಲು ಸಾಧ್ಯ.

ಸಂಘ ಮತ್ತು ಕರ್ನಾಟಕ ಲಲಿತಾಕಲಾ ಅಕಾಡೆಮಿ ಜಂಟಿಯಾಗಿ 'ಕರ್ನಾಟಕದ ಬಯಲು ಚಿತ್ರಾಲಯ'ದ ಮೂಲಕ ಐದು ದಿನಗಳ ತನಕ ಕರ್ನಾಟಕದ ಹೆಸರಾಂತ ಕಲಾವಿದರು ಸಂಘದ ಹೊರ ಆವರಣದಲ್ಲಿ ಸಾರ್ವಜನಿಕರ ಎದುರು ಕಲಾಕೃತಿಗಳನ್ನು ಚಿತ್ರಿಸಿ ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಕಲಾಪ್ರಕಾರಗಳ ಸಾಂಸ್ಕೃತಿಕ ಕೊಂಡಿಯಾಗಿ ಅನಾವರಣಗೊಂಡಿದ್ದು ಮತ್ತೊಂದು ವಿಶೇಷ. ಅಲ್ಲದೆ ಈ ಇದರ ಸಮಾರೋಪ ಸಮಾರಂಭದಲ್ಲಿ ವಿದೂಷಿ ರಜನಿ ರಾವ್ ಅವರು ಹಿಂದಿಯ ಮಕ್ಕಳಿಂದ ಪುರಂದರದಾಸರ ಕೀರ್ತನೆಗೆ ಕಥಕ್ ನೃತ್ಯವನ್ನು ಪ್ರದರ್ಶಿಸಿದ್ದು ಕೂಡಾ ಕನ್ನಡೇತರರಿಗೆ ಕನ್ನಡದ ದಾಸಸಾಹಿತ್ಯವನ್ನು ತಲುಪಿಸುವ ಪ್ರಯತ್ನವಾಗಿತ್ತು. ಇಂತಹ ಪ್ರಯತ್ನಗಳನ್ನು ದೆಹಲಿ ಕರ್ನಾಟಕ ಸಂಘ, ಜವಾಹರಲಾಲ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಜತೆಗೆ ದೆಹಲಿಯ ಎಲ್ಲಾ ಕನ್ನಡಿಗರೂ ಮಾಡಬೇಕಾಗಿದೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. ಬಿಜಿಎಲ್ ಸ್ವಾಮಿ ಶತಮಾನದ ನೆನಪು ವಿಚಾರ ಸಂಕಿರಣದಲ್ಲಿ ವಿಚಾರಮಂಡಿಸಿದ ಉಪನ್ಯಾಸಕಾರರು ಯಾರು?
2. ತುಳು–ಕೊಂಕಣಿ ಸಂಭ್ರಮ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ತಂಡ ಯಾವುದು?
3. 'ಅಮೆರಿಕಾದಲ್ಲಿ ನಾನು' ಎಂಬ ಕೃತಿಯ ಕರ್ತೃ ಯಾರು?
4. ಕವಿ ಡಿ.ವಿ. ಗುಂಡಪ್ಪ (ಡಿ.ವಿ.ಜಿ) ಅವರ ಪುತ್ರನ ಹೆಸರೇನು?
5. ಇತ್ತೀಚೆಗೆ ನಿಧನರಾದ ದೆಹಲಿಯ ಹಿರಿಯ ಕನ್ನಡಿಗ ರಂಗಕರ್ಮಿ ಯಾರು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.08.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಜುಲೈ 2017ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಶ್ರೀ ರಮೇಶ್ ಕೆ.ವಿ ಮತ್ತು ವಿಮಲಾ ಕೆ.ವಿ. 2) ಶ್ರೀ ಬಿ.ಸಿ. ಕುತ್ನಿ ಹಾಗೂ ಡಾ. ಶಂಕರ ಕುಂದಗೋಳ 3) 18 ಜೂನ್ 2017 4) ಇಂಟರ್‌ಪ್ರಿಟೇಶನ್ ಹುದ್ದಗೆ 5) ಶ್ರೀ ರಾಘವೇಂದ್ರ ಭಟ್

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಕುಮಾರ್ ಲಬ್ಬಿ, ಶ್ರೀ ರಾಜಶೇಖರ ಡಿ.ಎಸ್. ಶ್ರೀ ಶ್ರೀಧನ್ ಮೂರ್ತಿ, ಶ್ರೀಮತಿ ಮೈಥಿಲಿ ಅತ್ತಾವರ, ಶ್ರೀಮತಿ ಮೇಘನಾ ರಮೇಶ್, ಶಾಲಿನಿ ವಿ. ನಾಯಕ್.

## ಮುನ್ನೋಟ

ಆತ್ಮೀಯ ಸದಸ್ಯರುಗಳೆ,

ದೆಹಲಿ ಕರ್ನಾಟಕ ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಜೊತೆಗೆ ಈ ಬಾರಿ ವಿಶೇಷವಾಗಿ ರಾಜಧಾನಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರಿನ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಕರ್ನಾಟಕದ ವಿವಿಧ ಭಾಗಗಳ ಪ್ರಖ್ಯಾತ 15 ಕಲಾವಿದರಗಳು ಸುಮಾರು 30ಕ್ಕೂ ಹೆಚ್ಚು ಚಿತ್ರಗಳನ್ನು ರಚಿಸಿದ್ದು ನಾಲ್ಕು ದಿನಗಳ ಈ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತ್ತು. ಈ ಕಾರ್ಯಕ್ರಮದ ಸಂಚಾಲಕರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಶ್ರೀ ಚೆನ್ನು ಎಸ್. ಮಠದ, ಶ್ರೀ ಸುಧೀರ್ ಫಡ್ನೀಸ್, ಶ್ರೀಮತಿ ಜಮುನಾ ಸಿ. ಮಠದ, ಶ್ರೀಮತಿ ಸುಮಿತಾ ಮುರಗೋಡ ಹಾಗೂ ಪ್ರೊ. ಸಖಾರಾಮ ಉಪ್ಪೂರು ಅವರಿಗೆ ಅಭಿನಂದನೆಗಳು.

ಈ ಬಾರಿ ವಿದ್ಯಾರ್ಥಿ ವೇತನವನ್ನು ಪ್ರತಿಭಾವಂತ ಮಕ್ಕಳಿಗೆ ಮತ್ತು ಆರ್ಥಿಕವಾಗಿ ಅಗತ್ಯತೆ ಇರುವವರಿಗೆ ನೀಡಲಾಗುವುದು. ಸದಸ್ಯರುಗಳು ಇದರ ಲಾಭವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಸೆಪ್ಟೆಂಬರ್ ಮೊದಲನೆ ವಾರದಿಂದ ದೆಹಲಿ ಕರ್ನಾಟಕ ಸಂಘದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸುತ್ತಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ರಿಕೆಟನ್ನು ಯಶಸ್ವಿಗೊಳಿಸಿ. ಕಳೆದ ಬಾರಿ ಹಸ್ತಿನಾಪುರಕ್ಕೆ ಆಯೋಜಿಸಿದ್ದ ಪಿಕ್‌ನಿಕ್ ಯಶಸ್ವಿಯಾಗಿದ್ದು ಅದೇ ರೀತಿ ಈ ಬಾರಿ ಅಕ್ಟೋಬರ್ 1ರಂದು ಚಂಡೀಗಢಕ್ಕೆ ಪಿಕ್‌ನಿಕ್ ಆಯೋಜಿಸುತ್ತಿದ್ದೇವೆ. ದಯವಿಟ್ಟು ಸದಸ್ಯರುಗಳು ಸಂಘದ ಕಚೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಗೌರಿ ಗಣೇಶ ಹಬ್ಬದ ಪ್ರಯುಕ್ತವಾಗಿ ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದೇವೆ. ಡಾ.ವಿಷ್ಣುವರ್ಧನ್ ರಾಷ್ಟ್ರೀಯ ಉತ್ಸವ ಆಚರಿಸಲು ಡಾ. ವಿಷ್ಣು ಸೇನಾ ಸಮಿತಿಯು ಕರ್ನಾಟಕದಿಂದ ಬರುತ್ತಿದ್ದು ಇದೇ ತಿಂಗಳ 27ರಂದು ಬೆಳಗಿಂದ ರಾತ್ರಿಯವರೆಗೆ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ. ಖ್ಯಾತ ಚಲನಚಿತ್ರ ನಟರು, ನಟಿಯರು ಹಾಗೂ ಪರಭಾಷಾ ಚಿತ್ರನಟರು ಸಹ ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಕ್ರಮವನ್ನು ನೋಡಿ ಆನಂದಿಸಿ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಆಗಸ್ಟ್ 15** — **ಮಂಗಳವಾರ ಬೆಳಿಗ್ಗೆ 8.00 ಗಂಟೆಗೆ**

ಸ್ವಾತಂತ್ರ್ಯ ದಿನಾಚರಣೆ–**ಧ್ವಜಾರೋಹಣ**

**2017 ಆಗಸ್ಟ್ 20** — **ಭಾನುವಾರ ಸಂಜೆ : 5.00 ಗಂಟೆಗೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ವಾರ್ತಾ ಕೇಂದ್ರ ಹಾಗು ದೆಹಲಿ ಕರ್ನಾಟಕ ಸಂಘ ಸಂಯುಕ್ತಾಶ್ರಯದಲ್ಲಿ ಕನ್ನಡ ಚಲನಚಿತ್ರ **'ಕಿರಿಕ್ ಪಾರ್ಟಿ'**

**2017 ಆಗಸ್ಟ್ 25 ರಿಂದ 27** — **ಶುಕ್ರವಾರ ಬೆಳಿಗ್ಗೆ 8.00 ಗಂಟೆಗೆ**

ಗಣೇಶ ಸಾಂಸ್ಕೃತಿಕ ಉತ್ಸವ

**2017 ಆಗಸ್ಟ್ 27** — **ಭಾನುವಾರ ಬೆಳಿಗ್ಗೆಯಿಂದ**

ಡಾ. ವಿಷ್ಣು ಸೇನಾ ಸಮಿತಿ, ಬೆಂಗಳೂರು ಮತ್ತು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ **'ಡಾ. ವಿಷ್ಣುವರ್ಧನ ರಾಷ್ಟ್ರೀಯ ಉತ್ಸವ'**

**2017 ಸೆಪ್ಟೆಂಬರ್ 3** — **ಭಾನುವಾರ ಸಂಜೆ : 4.00 ಗಂಟೆಗೆ**

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಹೊರತರುತ್ತಿರುವ **'ಕವಿರಾಜ ಮಾರ್ಗ'** ಆಂಗ್ಲ ಅನುವಾದ ಕೃತಿ ಬಿಡುಗಡೆ ಹಾಗೂ **'ಪಂಪ ಕಾವ್ಯ ವೈಭವ'** ನೃತ್ಯರೂಪಕ.


## ಸಂಘದ ಆರ್ಟ್ ಗ್ಯಾಲರಿಯಲ್ಲಿ

**ಆಗಸ್ಟ್ 15 ರಿಂದ 20, 2017**ರವರೆಗೆ–ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಹಯೋಗದಲ್ಲಿ ನಡೆದ **'ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ'**ದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನ

## ಪಿಕ್‌ನಿಕ್

ದೆಹಲಿ ಕರ್ನಾಟಕ ಸಂಘವು ಸಂಘದ ಸದಸ್ಯರುಗಳಿಗೆ ಅಕ್ಟೋಬರ್ 1ರಂದು ಚಂಡೀಗಢಕ್ಕೆ ಪಿಕ್‌ನಿಕ್ ಆಯೋಜಿಸುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಸಿ.ಎಂ. ನಾಗರಾಜ : 9811325440, ಶ್ರೀ ವಿ.ವಿ. ಬಿರಾದಾರ : 9873005409, ಶ್ರೀ ರಾಧಾಕೃಷ್ಣ : 9818252183

## ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ



ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ 2017–18ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಸೆಪ್ಟೆಂಬರ್ ತಿಂಗಳ 3, 10, 17 ಮತ್ತು 24ರಂದು ಜೆ.ಎನ್.ಯು.ವಿನ ಹಳೆ ಕ್ಯಾಂಪಸ್‌ನಲ್ಲಿರುವ ಎಸ್.ಡಿ.ಜಿ. ಗ್ರೌಂಡ್‌ನಲ್ಲಿ ಆಯೋಜಿಸಲು ನಿರ್ಧರಿಸಿದೆ. ಆಟದಲ್ಲಿ ಕಡ್ಡಾಯವಾಗಿ ಕನ್ನಡಿಗರು ಹಾಗೂ ಸಂಘದ ಸದಸ್ಯರುಗಳು ಮಾತ್ರ ಭಾಗವಹಿಸಬಹುದಾಗಿದೆ.

## ವಿದ್ಯಾರ್ಥಿ ವೇತನ 2017–18

ದೆಹಲಿ ಕರ್ನಾಟಕ ಸಂಘದಿಂದ 2017–18ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು **20 ಸೆಪ್ಟೆಂಬರ್** 2017ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

**ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.**

*ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 11

ಆಗಸ್ಟ್ 2017

ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ

ಭಾರತವು ಸ್ವತಂತ್ರ ರಾಷ್ಟ್ರವಾಗಿ ಈ ಆಗಸ್ಟ್‌ಗೆ ಎಪ್ಪತ್ತು ವರ್ಷಗಳಾಗುತ್ತಿದೆ. ದೇಶ ವಿದೇಶಗಳಲ್ಲಿರುವ ಎಲ್ಲಾ ಭಾರತೀಯರು ಅತ್ಯಂತ ಸಂಭ್ರಮದಿಂದ ಈ ಸಲದ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದಾರೆ. ಜತೆಗೆ ದೇಶಪ್ರೇಮ ಮತ್ತು ರಾಷ್ಟ್ರೀಯತೆಯನ್ನು ಹೊಸರೀತಿಯಲ್ಲಿ ವಿಶ್ಲೇಷಿಸುವ ಪ್ರಯತ್ನಗಳೂ ನಡೆಯುತ್ತಿವೆ. ಶತಮಾನಗಳಾಚೆಯಿಂದ ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ವ್ಯಾಖ್ಯೆಗಳು ಕಾಲ ಸಂದರ್ಭ ಮತ್ತು ಪರಿಸ್ಥಿತಿಯನ್ನು ಅನುಸರಿಸಿ ಬದಲಾಗಿವೆ. ಹಿಂದಿನ ಕಾಲದಲ್ಲಿ ರಾಷ್ಟ್ರವೆಂಬುದು ಭೌಗೋಳಿಕ ಪ್ರದೇಶವನ್ನು ಬಿಂಬಿಸುತ್ತಾ ಒಂದರಿಂದ ಇನ್ನೊಂದು ಪ್ರತ್ಯೇಕವಾಗಿತ್ತು. ನಮಗೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಅದರ ಅರ್ಥವು ಭಿನ್ನವಾಗಿತ್ತು. ಇಂದು ಎಪ್ಪತ್ತು ವರ್ಷಗಳ ನಂತರ ಮತ್ತೆ ಹೊಸ ಅರ್ಥಗಳನ್ನು ರೂಪಿಸುತ್ತಾ ಹೋಗುತ್ತಿದ್ದೇವೆ. ಈ ಶತಮಾನದಲ್ಲಿ ರಾಷ್ಟ್ರಗಳು ಆರ್ಥಿಕವಾಗಿ ಮತ್ತು ಜಗತ್ತಿನಾದ್ಯಂತ ಪ್ರಭಾವ ಬೀರುವಂತಹ ಒಂದು ಶಕ್ತಿಯಾಗಲು ಯತ್ನಿಸುತ್ತವೆ. ಇದಕ್ಕೆ ಭಾರತವೂ ಹೊರತಲ್ಲ. ರಾಷ್ಟ್ರಗಳು ತಮ್ಮನ್ನು ತಾವು ಒಂದು ಶಕ್ತಿಯಾಗಿ ತೋರಿಸಲು ಇನ್ನೊಂದು ರಾಷ್ಟ್ರವನ್ನು ಪ್ರತಿಶಕ್ತಿಯಾಗದಂತೆಯೂ ತಡೆಯುತ್ತವೆ. ಹೀಗಾಗಿ ಕೆಲವೊಮ್ಮೆ ಕ್ಷುಲ್ಲಕವೆನಿಸುವ ವಿಷಯಗಳನ್ನು ಕಲ್ಪಿಸಿ ಜಾಗತಿಕ ಕ್ಲೇಶಗಳು ಉಂಟಾಗುವಂತೆ ರಾಷ್ಟ್ರಗಳು ಪ್ರಯತ್ನಿಸುತ್ತವೆ. ಇದೇ ಕಾಲ ಪರಿಧಿಯಲ್ಲಿ ಉದಾರವಾದಿ ಪರಿಕಲ್ಪನೆಗಳ ಚಿಂತಕರು ರಾಷ್ಟ್ರೀಯತೆ ಎಂಬ ತತ್ವದ ಮೇಲೆಯೇ ಜುಗುಪ್ಸೆಗೊಂಡು ತಮ್ಮ ತಮ್ಮ ರಾಷ್ಟ್ರಗಳನ್ನು ಬಲಿಷ್ಟಗೊಳಿಸುವ ರಾಷ್ಟ್ರನಾಯಕರ ಕುರಿತು ಋಣಾತ್ಮಕವಾದ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇಂತಹ ಆಲೋಚನೆಗಳನ್ನು ನಮ್ಮ ರಾಷ್ಟ್ರಗೀತೆಯನ್ನು ನೀಡಿದ ರಾಷ್ಟ್ರಕವಿ ರವೀಂದ್ರನಾಥ್ ಠಾಗೋರ್ ಅವರು ಕೂಡಾ ಹೊಂದಿರುವುದು ಅವರನ್ನು ಅಧ್ಯಯನ ಮಾಡುವಾಗ ಅರ್ಥವಾಗುತ್ತದೆ. ಸಾಮಾಜಿಕ ಸಾಮರಸ್ಯವನ್ನು ಕಳೆದುಕೊಂಡು ರಾಷ್ಟ್ರವು ಬಲಿಷ್ಟವಾದಾಗ ಮಾನವಕುಲಕ್ಕೆ ಹಾನಿಯಾಗುವುದು ಎಂದು ಅವರು ಹೇಳಿದ್ದರು. ಅವರ ಮಾತುಗಳು ಎಷ್ಟು ಸತ್ಯವೆಂದು ಕಾಲವು ನಿರ್ಧರಿಸಬೇಕು. ಇಂದಿನ ಸಂದರ್ಭದಲ್ಲಿ ಒಂದು ಭೌಗೋಳಿಕ ಸೀಮೆಯ ಪರಿಧಿಯೊಳಗಿನ ಜನರ ರಾಷ್ಟ್ರೀಯತೆಯ ಕಲ್ಪನೆಗಳು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲು ಕಾರಣಗಳು ಕೂಡಾ ಇವೆ. ಒಂದು ದೇಶದ ಜನರು ಇನ್ನೊಂದು ದೇಶದ ಜನರ ವಿವಿಧ ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಮತ್ತು ಸಾಂಸ್ಕೃತಿಕ ಚೌಕಟ್ಟುಗಳಲ್ಲಿ ಅಂತರ್ಗತವಾಗಿ ಒಂದರಿಂದ ಇನ್ನೊಂದು ಬೇರೆ ಎನ್ನುವುದು ಅಸ್ಪಷ್ಟವಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಜನಸಾಮಾನ್ಯರು ಅರ್ಥೈಸುವ ರಾಷ್ಟ್ರೀಯತೆಯು ರಾಷ್ಟ್ರನಾಯಕರು ಕಟ್ಟುತ್ತಿರುವ ರಾಷ್ಟ್ರೀಯತೆಯಿಂದ ಭಿನ್ನವಾಗಿರುತ್ತವೆ. ಈ ಸ್ವಾತಂತ್ರ್ಯವನ್ನು ಸಂಭ್ರಮಿಸುವ ಜತೆಗೆ ನಾವು ನಮ್ಮೊಳಗಿನ ದೇಶಪ್ರೇಮದ ವ್ಯಾಖ್ಯೆಯನ್ನು ಸೀಮಿತಗೊಳಿಸದೇ ಇನ್ನಷ್ಟು ವಿಸ್ತೃತವಾದ ಅರ್ಥಗಳನ್ನು ಹುಡುಕಬೇಕಾಗಿದೆ.

***


ದೆಹಲಿಯ ಹಿರಿಯ ಕನ್ನಡಿಗರಾದ ಎಚ್.ಎಸ್. ಕುಲಕರ್ಣಿಯವರು ಇದೇ ಜುಲೈ 15ರಂದು ನಿಧನರಾದರು. ಕನ್ನಡಭಾರತಿಯ ಕಾಲ ಮತ್ತು ಅದರ ನಂತರದಲ್ಲಿ ದೆಹಲಿಯ ಕನ್ನಡ ರಂಗಭೂಮಿಯು ಪ್ರಜ್ವಲಿಸುವಂತೆ ಮಾಡಿದ ರಂಗಪರಿಣಿತರು ಅವರು. ದೆಹಲಿಯ ಕನ್ನಡ ರಂಗಭೂಮಿಗೆ ಅಪಾರ ಕೊಡುಗೆಗಳನ್ನು ನೀಡಿದ ಅವರು ತಾವಿದ್ದ ಪರಿಸರದ ಕನ್ನಡಿಗರನ್ನು ಒಂದೆಡೆ ಸೇರಿಸಿ ಅವರೆಲ್ಲರಿಗೂ ಸೂಕ್ತವಾಗುವಂತಹ ನಾಟಕಗಳನ್ನು ಆರಿಸಿ ತರಬೇತಿ ನೀಡಿ ಪ್ರದರ್ಶನಗಳನ್ನು ನೀಡುತ್ತಿದ್ದರು. ಕಳೆದ ತೊಂಭತ್ತರ ದಶಕದಲ್ಲಿ ಪ್ರತಿವರ್ಷ ಒಂದೆರಡು ನಾಟಕಗಳನ್ನು ದೆಹಲಿಯ ಕನ್ನಡಿಗರಿಂದಲೇ ಮಾಡಿಸುತ್ತಿದ್ದರು. ಅವರ ತಂಡದ ಪ್ರತಿಯೊಬ್ಬನ ಬಗ್ಗೆಯೂ ಅವರು ಹೆಮ್ಮೆಪಡುತ್ತಿದ್ದರು. ಅವರಿಂದ ತರಬೇತಾದ ಅನೇಕರು ಇಂದು ಉತ್ತಮ ನಟರಾಗಿ, ನಿರ್ದೇಶಕರಾಗಿ ದೆಹಲಿಯ ಕನ್ನಡ ರಂಗಭೂಮಿಯನ್ನು ಮುಂದುವರಿಸುತ್ತಿದ್ದಾರೆ. ಅವರ ಶಿಷ್ಯರೆಲ್ಲರೂ ಸೇರಿ ಅವರೇ ಬರೆದ ಅಥವಾ ಬೇರೆಯೇ ಒಂದು ನಾಟಕವನ್ನು ದೆಹಲಿಯಲ್ಲಿ ತಯಾರಿಸಿ ಪ್ರದರ್ಶಿಸುವುದು ನಾವು ಅವರಿಗೆ ನೀಡಬಹುದಾದ ಶ್ರದ್ಧಾಂಜಲಿಯಾಗಿದೆ. ಅವರು ತಮ್ಮ ಜೀವನ ನಾಟಕವನ್ನು ಮುಗಿಸಿ ತೆರೆಮರೆಗೆ ಸರಿದರೂ ರಂಗಭೂಮಿಯ ನಮಗೆಲ್ಲರಿಗೂ ಅವರು ಯಾವಾಗಲೂ ಸ್ಫೂರ್ತಿದಾಯಕರು. ಅ

*ಬಾಲಕೃಷ್ಣ ನಾಯ್ಕ್ ಡಿ.*




# ‘ಸುಲಲಿತ ಸತ್ವಶಾಲಿ ಲೇಖಕ ಬಿ.ಜಿ.ಎಲ್. ಸ್ವಾಮಿ’

## ಟಿ.ಎಸ್. ನಾಗಾಭರಣ



ವಿಶಿಷ್ಟ ಬಗೆಯ ಬರವಣಿಗೆಯ ಮೂಲಕ ಓದುಗರು ಸುಲಲಿತವಾಗಿ ಓದುವಂತೆ ಮಾಡುವ ಕಲೆಗಾರಿಕೆ ಬಿಜಿಎಲ್ ಸ್ವಾಮಿ ಅವರಿಗಿತ್ತು. ಮತ್ತು ಅವರು ಮಂಡಿಸುವ ವಿಷಯಗಳು ಸತ್ವಶಾಲಿಯಾಗಿ ಪರಿಣಾಮ ಬೀರಿವೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜುಲೈ 9ರಂದು ಜರುಗಿದ ಡಾ. ಬಿ.ಜಿ.ಎಲ್. ಸ್ವಾಮಿ ಜನ್ಮಶತಮಾನೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿ ಬಿ.ವಿ. ಕಾರಂತರ ‘ಸತ್ತವರ ನೆರಳು’ ನಾಟಕಕ್ಕೆ ಪರವಿರೋಧಗಳು ವ್ಯಕ್ತವಾದಾಗ ಸ್ವಾಮಿ ಅವರು ನಾಟಕವನ್ನು ನೋಡಿ ಮೆಚ್ಚುಗೆಯಿಂದ ಬರೆದ ಲೇಖನದಿಂದ ಆ ನಾಟಕವನ್ನು ಹೊಸದೃಷ್ಟಿಕೋನದಿಂದ ನೋಡಲು ಸಾಧ್ಯವಾಯಿತು. ಇದರಿಂದ ಭಿನ್ನ ವಾತಾವರಣ ಸೃಷ್ಟಿಯಾಯಿತು ಎಂದು ಸ್ಮರಿಸಿಕೊಂಡರು.

ಬಿ.ಜಿ.ಎಲ್. ಸ್ವಾಮಿ ಅವರ ಬದುಕು–ಬರಹಗಳು ಕುರಿತು ಮಾತನಾಡಿದ ವಿಮರ್ಶಕ ಡಾ. ಎಚ್. ಎಸ್. ಸತ್ಯನಾರಾಯಣ ಅವರು ಸ್ವಾಮಿ ಅವರ ಬಹುಮುಖಿ ಆಸಕ್ತಿ ಮತ್ತು ಕುತೂಹಲಗಳು ಅವರ ಕೃತಿಗಳಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿದರು. ಸ್ವಾಮಿ ಅವರನ್ನು ಅವರು ವಿಡಂಬನಾ ಸಾಹಿತಿ ಎಂದು ಬಣ್ಣಿಸಿದರು. ಬಿ.ಜಿ.ಎಲ್. ಸ್ವಾಮಿ ಅವರ ಸಸ್ಯ ಪ್ರೀತಿ, ಸಂಶೋಧನೆ ಅವರ ವಿದ್ಯಾರ್ಥಿ ಜೀವನ, ದಾಂಪತ್ಯ, ಸಾಹಿತ್ಯ ಪ್ರೀತಿ, ಸಾಹಿತಿಗಳ ಜೊತೆಗಿನ ಒಡನಾಟ ಎಲ್ಲವನ್ನು ಸತ್ಯನಾರಾಯಣ ಮನಮುಟ್ಟುವಂತೆ ತಿಳಿಸಿದರು.

ಬಿ.ಜಿ.ಎಲ್. ಸ್ವಾಮಿ ಅವರ ‘ಅಮೇರಿಕಾದಲ್ಲಿ ನಾನು’ ಕೃತಿಯ ಕುರಿತು ಮಾತನಾಡಿದ ದೆಹಲಿಯ ಲೇಖಕ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಸ್ವಾಮಿ ಅವರ ಈ ಅನುಭವ ಕಥನ ಅಮೇರಿಕಾದ ಇತಿಹಾಸ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕನ್ನು ರಸವತ್ತಾಗಿ ತೆರೆದಿಡುತ್ತದೆ ಎಂದು ಅಭಿಪ್ರಾಯಪಟ್ಟರು. ಈ ಕೃತಿಯ ಹಾಸ್ಯಮಯ ಪ್ರಸಂಗಗಳು ಮಾನವ ಸಹಜ ನಡವಳಿಕೆಗೆ ಕನ್ನಡಿಯಾಗಿದೆ ಎಂಬ ಅನಿಸಿಕೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಬಿ.ಜಿ.ಎಲ್. ಸ್ವಾಮಿ ಅವರ ಈ ನೆನಪಿನ ಕಾರ್ಯಕ್ರಮ ಸಂಘದ ಹೆಮ್ಮೆಯ ಕ್ಷಣವಾಗಿದೆ. ಈ ಸಮಾರಂಭವು ಕನ್ನಡ ಸಾಹಿತ್ಯಲೋಕದ ಚರಿತ್ರೆಯಲ್ಲಿ ಯಾವಾಗಲೂ ದಾಖಲಾಗಿ ಉಳಿಯುವುದೆಂದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಸಾಹಿತ್ಯಾಸಕ್ತರು ಭಾಗವಹಿಸಿದ್ದರು. ಎನ್.ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮ ನಿರೂಪಿಸಿದರು. ಅ

***ಅಭಿಮತ ವರದಿ***





# ಓದುಗರಿಗೆ ಆಹ್ಲಾದಕರ ಅನುಭವ ನೀಡುವ ‘ಅಮೆರಿಕಾದಲ್ಲಿ ನಾನು’

**ಬಿ.ಜಿ.ಎಲ್. ಸ್ವಾಮಿ** ಅವರ ‘ಅಮೆರಿಕದಲ್ಲಿ ನಾನು’ ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜುಲೈ 9ರಂದು ಜರುಗಿದ ಡಾ. ಬಿ.ಜಿ.ಎಲ್. ಸ್ವಾಮಿ ಜನ್ಮಶತಮಾನೋತ್ಸವ ಸಮಾರಂಭದಲ್ಲಿ **ಡಾ. ಅವನೀಂದ್ರನಾಥ್ ರಾವ್** ಅವರು ಮಾಡಿದ ಭಾಷಣದ ಲೇಖನ ರೂಪ.

ಅಮೆರಿಕ ದೇಶದ ಸಂಸ್ಕೃತಿ, ಇತಿಹಾಸ ಮತ್ತು ರಾಜಕೀಯ ಸಂಗತಿಗಳನ್ನು ಹಾಸ್ಯ ಪ್ರಸಂಗಗಳ ಮೂಲಕ ನೀಡಿದ ಡಾ. ಬಿ.ಜಿ.ಎಲ್. ಸ್ವಾಮಿ ಅವರ ‘ಅಮೆರಿಕದಲ್ಲಿ ನಾನು’ ಒಂದು ವಿಶಿಷ್ಟ ಕೃತಿ. ಲಲಿತ ಪ್ರಬಂಧ ಶೈಲಿಯಲ್ಲಿರುವ ಇದು ಮೊದಲ ಬಾರಿಗೆ ಪ್ರಕಟವಾಗಿದ್ದು 1962ರಲ್ಲಿ. ಮೂರು ಬಾರಿ ಮರುಮುದ್ರಣಗೊಂಡಿದ್ದು ಅದರ ಜನಪ್ರಿಯತೆಯನ್ನು ಹೇಳುತ್ತದೆ. ಮೈಸೂರಿನ ಕಾವ್ಯಾಲಯ ಪ್ರಕಾಶನ ಇದನ್ನು ಪ್ರಕಟಿಸಿದೆ.

ತೊಂಬತ್ತರ ದಶಕದ ಆರಂಭದಲ್ಲಿ ನಾನು ಮಂಗಳೂರು ವಿಶ್ವವಿದ್ಯಾಲಯದಡಿಯಲ್ಲಿ ವಾಣಿಜ್ಯ ವಿಷಯವನ್ನು ಓದುತ್ತಿದ್ದೆ. ಆಗ ಪದವಿ ತರಗತಿಗಳಲ್ಲಿ ಕನ್ನಡವನ್ನು ಐಚ್ಛಿಕವಾಗಿ ಓದುವ ವಿದ್ಯಾರ್ಥಿಗಳಿಗೆ ‘ಅಮೆರಿಕದಲ್ಲಿ ನಾನು’ ಪಠ್ಯವಾಗಿತ್ತು. ನನ್ನ ಗುರುಗಳು ಮತ್ತು ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರಾಗಿ ಗುರುತಿಸಿಕೊಂಡಿದ್ದ ಪ್ರೊ. ಡಿ. ರಘುನಾಥ ರಾಯರು ಇದನ್ನು ಸ್ವಾರಸ್ಯವಾಗಿ ಬೋಧಿಸುತ್ತಿದ್ದರು. ವಾಣಿಜ್ಯ ವಿದ್ಯಾರ್ಥಿಯಾಗಿದ್ದರೂ ಕನ್ನಡದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದ ನನಗೆ ಕನ್ನಡದಲ್ಲಿ ಎಂ.ಎ. ವ್ಯಾಸಂಗಕ್ಕೆ ಅವಕಾಶವಿತ್ತು ಮತ್ತು ದಶಕದ ನಂತರ ಅದನ್ನು ಪಡೆಯುವಲ್ಲಿ ಯಶಸ್ವಿಯಾದೆ. ಇದೀಗ ದೆಹಲಿ ಕರ್ನಾಟಕ ಸಂಘ ಸ್ವಾಮಿ ಅವರ ಕೃತಿಯ ಕುರಿತು ಉಪನ್ಯಾಸ ನೀಡಲು ನನಗೆ ಅವಕಾಶ ನೀಡಿದೆ. ಇದರಿಂದ ನನ್ನ ಕಾಲೇಜು ದಿನಗಳ ನೆನಪು ಮರುಕಳಿಸಿದೆ.

ಸಾಹಿತ್ಯದಲ್ಲಿ ‘ಅಮೆರಿಕದಲ್ಲಿ ನಾನು’ ಕೃತಿಯನ್ನು ಪ್ರವಾಸ ಕಥನ ಪ್ರಕಾರವಾಗಿ ಗುರುತಿಸಿರಬಹುದು. ಆದರೆ ಸ್ವಾಮಿಯವರೇ ಹೇಳುವಂತೆ ಇದು ಅನುಭವದ ಚಿತ್ರ. ಹಾಗಾಗಿ ಇದು ಅಮೆರಿಕ ದೇಶದಲ್ಲಿ ಕೆಲವು ವರ್ಷ ನೆಲೆನಿಂತ ಲೇಖಕರ ಅನುಭವ ಕಥನ. ಪ್ರಸ್ತಾವನೆಯಲ್ಲಿ ಲೇಖಕರು ಅಮೆರಿಕನ್ನರ ಬಗೆಗೆ ಗೌರವದಿಂದ ಬರೆಯುತ್ತಾರೆ. ಇತರ ದೇಶಗಳ ಸಾಮರ್ಥ್ಯವನ್ನು ತಮ್ಮ ದೇಶಕ್ಕೆ ಗಳಿಸಿಕೊಳ್ಳಲು ಪ್ರಯತ್ನಿಸುವ ಇವರ ಗುಣಗಳನ್ನು ಮೆಚ್ಚಿಕೊಳ್ಳುತ್ತಾರೆ. ಆರಂಭದಿಂದ ಕೊನೆಯವರೆಗೂ ತಮ್ಮನ್ನೂ ಮತ್ತು ಅಮೆರಿಕನ್ನರನ್ನು ಲೇವಡಿ ಮಾಡುವ ಸ್ವಾಮಿಯವರು ‘ಹಾಸ್ಯ ಮತ್ತು ಹಾಸ್ಯಾಸ್ಪದಕ್ಕೆ ಎಲ್ಲ ದೇಶಗಳಲ್ಲಿ, ಎಲ್ಲ ಬಗೆಯ ಜನರಲ್ಲಿ ಅವಕಾಶವಿದೆ. ಇದು ಇರಬೇಕು ಮತ್ತು ಇದನ್ನು ಸಹನೆಯಿಂದ ನೋಡಬೇಕು’ ಎನ್ನುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಹಿಂದಿನ ವರ್ಷ ಸ್ವಾಮಿಯವರು ಹಡಗಿನ ಮುಖಾಂತರ ಅಮೆರಿಕ ದೇಶಕ್ಕೆ ಪಯಣ ಬೆಳೆಸುತ್ತಾರೆ. ಸಂಶೋಧನಾ ನಂತರದ ಉನ್ನತ ಅಧ್ಯಯನಕ್ಕೆ ಅವರು ಅಮೆರಿಕದ ಬಾಸ್ಟನ್ ನಗರ ತಲುಪಬೇಕಾಗಿತ್ತು. ಬಾಸ್ಟನ್ ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಡಿದ ಭೂಪ್ರದೇಶ. ಆಗ ತಾನೇ ಮುಗಿದ ಜಾಗತಿಕ ಯುದ್ಧಾನಂತರ ತಾಯ್ನಾಡಿಗೆ ತೆರಳುವ ಸೈನಿಕರಿಂದಾಗಿ ಸ್ವಾಮಿಯವರಿಗೆ ಆಕಾಶಯಾನ ಕೈತಪ್ಪುತ್ತದೆ.

> *ಅಮೆರಿಕನ್ನರ ಕಣ್ಣಲ್ಲಿ ಭಾರತೀಯರನ್ನು ಕಾಣುವ ಬಗೆಯನ್ನು ಮಿಸ್ಟರ್ ಮತ್ತು ಮಿಸೆಸ್ ಟಬ್ ಮೂಲಕ ನೋಡಬಹುದು. ಅನಾಗರಿಕ ದೇಶವನ್ನು ನಾಗರಿಕ ದೇಶವನ್ನಾಗಿ ಮಾಡಿದ ಬ್ರಿಟಿಷರು ಓರ್ವ ಹುಚ್ಚನ ಅಹಂಕಾರ ಮತ್ತು ಸ್ವಾಭಿಮಾನದಿಂದಾಗಿ ಭಾರತವನ್ನು ಬಿಟ್ಟು ಹೊರಡಬೇಕಾಯಿತು ಎಂದು ಗಾಂಧೀಜಿಯನ್ನು ಉದ್ದೇಶಿಸಿ ಮಿಸೆಸ್ ಟಬ್ ಹೇಳುತ್ತಾಳೆ.*

ಹಡಗಿನಲ್ಲಿ ಕಿಕ್ಕಿರಿದು ತುಂಬಿದ ಪಯಣಿಗರ ನಡುವೆ ಸ್ವಾಮಿಯವರು ಅನುಭವಿಸಿದ ಫಜೀತಿ ಕೃತಿಯಲ್ಲಿ ರಂಜನೀಯವಾಗಿ ಅನಾವರಣಗೊಂಡಿದೆ.

ಮುಖ್ಯವಾಗಿ ಕ್ಯಾಬಿನ್ ಇಲ್ಲದ ಶೌಚಾಲಯಗಳಲ್ಲಿ ಕಮೋಡ್ ಮಧ್ಯೆ ತಗಡು ಇಟ್ಟಿರುತ್ತಾರೆ. ಆದರೆ ಎದುರು ಕುಳಿತುಕೊಂಡವರನ್ನು ಕಾಣದಿರುವುದಕ್ಕೆ ಮರೆಯಿಲ್ಲ. ಎದುರಲ್ಲಿ ಕುಳಿತವರು ಲೋಕಾಭಿರಾಮವಾಗಿ ಧಾರ್ಮಿಕ, ರಾಜಕೀಯ ವಿದ್ಯಾಮಾನಗಳನ್ನು ಚರ್ಚಿಸುವುದು ಇಲ್ಲಿನ ಅಚ್ಚರಿ. ಅಮೆರಿಕನ್ನರಿಗೆ ಶೌಚ ಕಾರ್ಯ ಎಷ್ಟೊಂದು ಸಹಜ ಕ್ರಿಯೆ ಎಂಬುದನ್ನು ನಾವು ತಿಳಿಯಬಹುದು.

ಅಮೆರಿಕನ್ನರಿಗೆ ಹ್ಯಾಟು ಧರಿಸುವುದು ನಾಗರಿಕ ಲಕ್ಷಣ. ಬಿ.ಜಿ.ಎಲ್. ಸ್ವಾಮಿಯವರು ಭಾರತೀಯರ ಟೋಪಿಯ ಜೊತೆ ಹ್ಯಾಟನ್ನು ತುಲನೆ ಮಾಡುತ್ತಾರೆ. ಅಮೆರಿಕದಲ್ಲಿ ಮಹಿಳೆಯರು ಖಾಸಗಿಯಾಗಿ ಮುಖಾಮುಖಿಯಾದಾಗ ಹ್ಯಾಟನ್ನು ಕಳಚಿ ತಲೆಬಾಗಬೇಕು. ಆದರೆ ವಾಣಿಜ್ಯ ಸಂಕೀರ್ಣಗಳಲ್ಲಿ ಇದರ ಅಗತ್ಯವಿಲ್ಲ.

ಸ್ವಾಮಿಯವರು ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಒಮ್ಮೆ ಓರ್ವ ತಾಯಿ ಮತ್ತು ಮಗಳು ಇವರ ಟೋಪಿಗಾಗಿ ದುಂಬಾಲು ಬಿದ್ದು ಅದನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ. ಪಾರ್ಟಿಯಲ್ಲಿ ಸ್ವಾಮಿಯವರ ಟೋಪಿಯನ್ನು ಧರಿಸಿದ ಆ ಹುಡುಗಿ ಮರುದಿನ ಪತ್ರಿಕೆಯಲ್ಲಿ ಸುದ್ದಿಯಾಗುತ್ತಾಳೆ. ಭಾರತದ ಟೋಪಿ ಅಮೆರಿಕನ್ನರ ಕುತೂಹಲಕ್ಕೆ ಕಾರಣವಾಗುತ್ತದೆ. ಇದು ಅಮೆರಿಕನ್ನರ ಫ್ಯಾಶನ್‌ಪ್ರಿಯತೆಯನ್ನು ಹೇಳುತ್ತದೆ. ಅವರು ಹೇಳುವ ಸೀರೆಯ ಕತೆಯೂ ರಸವತ್ತಾಗಿದೆ. ಈ ಸಂಗತಿಗಳು ಅಮೆರಿಕನ್ನರು ಅನ್ಯ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳುವ ಬಗೆಯನ್ನು ಪರಿಚಯಿಸಿದೆ.

ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ ರೀವೀರ್ ಎಂಬ ಯೋಧನ ಹೆಸರು ಅಜರಾಮರ. ಬ್ರಿಟಿಷ್ ಸೈನಿಕರು ಕಾನ್‌ಕರ್ಡ್ ಪ್ರದೇಶವನ್ನು ಆಕ್ರಮಿಸುವ ಮೊದಲು ಪಾಲ್ ರೀವೀರ್ ಅವರನ್ನು ತಡೆಯಲು ಉಪಾಯ ಹೂಡುತ್ತಾನೆ. ಹಾರ್ವರ್ಡ್ ಚೌಕ್‌ನಲ್ಲಿ ರೀವೀರ್ ಬ್ರಿಟಿಷರಿಂದ ತಪ್ಪಿಸಿಕೊಳ್ಳುತ್ತಾನೆ. ಚಾರಿತ್ರಿಕ ಘಟನೆಯ ಪುನರಭಿನಯವನ್ನು ಹಾರ್‌ವರ್ಡ್ ವಿಶ್ವವಿದ್ಯಾನಿಲಯದ ಆವರಣದಲ್ಲಿ ಏಪ್ರಿಲ್ ತಿಂಗಳ 18ರಂದು ಮಾಡುತ್ತಾರೆ. 18.04.1947ರಂದು ಇದರ ಪುನರಭಿನಯ ನಡೆದಾಗ ನಲವತ್ತು ಜನ ಬ್ರಿಟಿಷ್ ಸೈನಿಕರಲ್ಲಿ ಒಬ್ಬನಾಗಿ ಸ್ವಾಮಿಯವರು ಭಾಗವಹಿಸುತ್ತಾರೆ. ಪೋಕರಿಗಳಾಗಿ ಕುಖ್ಯಾತರಾದ ರ‍್ಯಾಡ್‌ಕ್ಲಿಫ್ ಕಾಲೇಜಿನ ಹುಡುಗಿಯರು ಈ ಪ್ರಸಂಗಕ್ಕೆ ಅಡ್ಡಿಪಡಿಸುತ್ತಾರೆ. ಕಾರ್ಯಕ್ರಮ ವಿಫಲಗೊಂಡ ಈ ಪೇಚಾಟವನ್ನು ಸ್ವಾಮಿಯವರು ವಿವರಿಸುವಾಗ ನಗು ಬರುತ್ತದೆ.

ಭಾರತದಲ್ಲಿ ಸೈಕಲ್ ಇರುವಂತೆ ಅಮೆರಿಕನ್ನರಿಗೆ ಕಾರು. ಒಂದೆಡೆ ಕೋರ್ಟ್ ವ್ಯವಹಾರಕ್ಕಾಗಿ ಸ್ವಾಮಿಯವರು ತನ್ನ ಸೆಕ್ರೆಟರಿಯ ಕಾರಿನಲ್ಲಿ ತೆರಳುತ್ತಾರೆ. ಆಕೆಗೆ ಕಾರು ಓಡಿಸುವುದು ಎಂದರೆ ರೋಮಾಂಚನಾಕಾರಿ. ಇವಳ ಜೊತೆಗಿನ ಪಡಿಪಾಟಲನ್ನು ಸ್ವಾಮಿಯವರು ತಿಳಿಹಾಸ್ಯದಲ್ಲಿ ಬರೆಯುತ್ತಾರೆ. ಅಮೆರಿಕದಲ್ಲಿ ಕೂಲಿ ಕಾರ್ಮಿಕರು ಮತ್ತು ಕುಶಲಕರ್ಮಿಗಳು ಕೂಡ ದೈನಂದಿನ ಕೆಲಸಗಳಿಗೆ ಕಾರಿನಲ್ಲೇ ತೆರಳುತ್ತಾರೆ ಎಂಬುದನ್ನು ಸ್ವಾಮಿಯವರು ಸ್ಮರಿಸುತ್ತಾರೆ.

ನ್ಯೂಯಾರ್ಕ್‌ನ ಹೋಟೆಲೊಂದರಲ್ಲಿ ಸ್ವಾಮಿಯವರು ಒಮ್ಮೆ ಉಳಿದುಕೊಳ್ಳುತ್ತಾರೆ. ಅಲ್ಲಿನ ಕಮೋಡ್ ಪಕ್ಕದಲ್ಲಿ ಗೂಡಿನಂತೆ ಇದ್ದ ಪೆಟ್ಟಿಗೆಯಲ್ಲಿ ಕರಿಕಟ್ಟಿನ ದಪ್ಪ ಪುಸ್ತಕ ಕಾಣಿಸುತ್ತದೆ. ತೆರೆದು ನೋಡಿದರೆ ಬೈಬಲ್! ಇದು ಅಮೆರಿಕದ ಮತ ಪ್ರಚಾರ ವೈಖರಿಗೆ ಸ್ವಾಮಿಯವರು ಹಿಡಿದ ಕನ್ನಡಿ.

ಸ್ವಾಮಿಯವರು ವಿವರಿಸುವ ‘ರ‍್ಯಾಕೆಟ್ ವ್ಯಾಪಾರ’ ಶ್ರೀಮಂತ ದೇಶದ ಕಪ್ಪು ಮುಖವನ್ನು ಬಯಲುಗೊಳಿಸುತ್ತದೆ. ಅಮೆರಿಕದಲ್ಲಿ ಡೆಮಾಕ್ರಟಿಕ್ (ಪ್ರಜಾ ರಾಜ್ಯ) ಮತ್ತು ರಿಪಬ್ಲಿಕನ್ (ಜನತಾ ಸ್ವಾಮ್ಯ ಪಕ್ಷ) ರಾಜಕೀಯದ ಪ್ರಮುಖ ಪಕ್ಷಗಳು. ಮೇಯರ್ ಚುನಾವಣೆಯಂತಹ ಸ್ಥಳೀಯ ಚುನಾವಣೆಯಲ್ಲೂ ಅಲ್ಲಿನ ರಾಜಕೀಯ ವ್ಯಕ್ತಿಗಳು ಜನರನ್ನು ಬೆದರಿಸಿ ಮತ ಪಡೆಯಲು



ಹವಣಿಸುತ್ತಾರೆ. ಇದನ್ನು ಸ್ವಂತ ಅನುಭವದ ಮೂಲಕ ಸ್ವಾಮಿಯವರು ತಿಳಿಸುತ್ತಾರೆ.

ಅಮೆರಿಕನ್ನರ ಕಣ್ಣಲ್ಲಿ ಭಾರತೀಯರನ್ನು ಕಾಣುವ ಬಗೆಯನ್ನು ಮಿಸ್ಟರ್ ಮತ್ತು ಮಿಸೆಸ್ ಟಬ್ ಮೂಲಕ ನೋಡಬಹುದು. ಅನಾಗರಿಕ ದೇಶವನ್ನು ನಾಗರಿಕ ದೇಶವನ್ನಾಗಿ ಮಾಡಿದ ಬ್ರಿಟಿಷರು ಓರ್ವ ಹುಚ್ಚನ ಅಹಂಕಾರ ಮತ್ತು ಸ್ವಾಭಿಮಾನದಿಂದಾಗಿ ಭಾರತವನ್ನು ಬಿಟ್ಟು ಹೊರಡಬೇಕಾಯಿತು ಎಂದು ಗಾಂಧೀಜಿಯನ್ನು ಉದ್ದೇಶಿಸಿ ಮಿಸೆಸ್ ಟಬ್ ಹೇಳುತ್ತಾಳೆ. ಸ್ವಾಮಿ ಅವರಿಗೆ ಪ್ರಿಯರಾಗಿದ್ದ ಈ ದಂಪತಿಗಳ ಮುಖಾಂತರ ಅಮೆರಿಕದ ಆಸಕ್ತಿದಾಯಕ ತಾಣಗಳನ್ನು ಇಲ್ಲಿ ನೋಡಬಹುದು. ಅದರಲ್ಲಿ ಕಾನ್‌ಕರ್ಡ್‌ನಲ್ಲಿರುವ ಕವಿ ರಾಲ್ಫ್ ವಾಲ್ಡೊ ಎಮರ್‌ಸನ್ ವಾಸಿಸುತ್ತಿದ್ದ ಮನೆಯೂ ಒಂದು. ಕವಿಯ ಊರನ್ನು ಮತ್ತು ಆತನ ವಾಸದ ಮನೆಯನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವ ಪರಂಪರೆ ನಮ್ಮಲ್ಲಿ ಇಲ್ಲ. ಅಪರೂಪ ಎಂಬಂತೆ ನಮ್ಮ ನಾಡಿನಲ್ಲಿರುವ ಕವಿ ಕುವೆಂಪುರವರ ಕುಪ್ಪಳಿ ಗ್ರಾಮ ಮಾತ್ರ ಇಲ್ಲಿ ಅನುಸರಣೀಯ. ಎಮರ್‌ಸನ್‌ನ ಸಂಗ್ರಹಾಲಯದಲ್ಲಿ ಫ್ರೆಂಚ್ ಅನುವಾದಿತ ರಾಮಾಯಣವೂ ಇದೆಯಂತೆ!

ಈ ಕೃತಿಯ ಕೊನೆಯಲ್ಲಿ 'ಹದಿನಾರಣೆ ಬಾಸ್ಟೋನಿಯನ್ ಮಹಿಳೆಯರು' ಕುರಿತು ಸ್ವಾಮಿ ಬರೆಯುತ್ತಾರೆ ಬಾಸ್ಟೋನಿಯನ್‌ರು ತಾವು ನಿಜವಾದ ಅಮೆರಿಕನ್ ಸಂಸ್ಕೃತಿಯ ವಕ್ತಾರರು ಮತ್ತು ಮೂಲ ಪುರುಷರು ಎಂದು ಭಾವಿಸುತ್ತಾರೆ. 'ರೆಡ್ ಇಂಡಿಯನ್' ಎಂಬ ಮೂಲ ನಿವಾಸಿಗಳು ಇದ್ದ ಪ್ರದೇಶ ಮುಂದೆ ನಾಗರಿಕ ಸಂಸ್ಕೃತಿಯಾಗಿ ಬೆಳೆಯುವಲ್ಲಿ ತಮ್ಮ ಪಾತ್ರವಿದೆ ಎಂದು ಇವರು ಜಂಭಪಡುತ್ತಾರೆ.

ಔತಣ ಕೂಟವೊಂದನ್ನು ಆಯೋಜಿಸಿದ ಬಾಸ್ಟೋನಿಯನ್ ಮಹಿಳೆಯೊಬ್ಬಳು ಬೇರೆ ಬೇರೆ ದೇಶದ ಅನಾಗರಿಕ ಜನರ ಬಗೆಗೆ ತಿಳಿಯಬಯಸುತ್ತಾಳೆ. ಸ್ವಾಮಿಯವರು ತಮ್ಮ ಕರ್ನಾಟಕ ರಾಜ್ಯಕ್ಕೆ ಸಮೀಪದ ಮಲಬಾರಿನ ಜನರ ಕುರಿತು ಹೇಳುತ್ತಾರೆ. ತಕ್ಷಣವೇ ಆಕೆ ಹೇಳುತ್ತಾಳೆ 'ಅದು ಮಲಬಾರ್ ಅಲ್ಲ. ಅದರ ಮೂಲ ಹೆಸರು 'ಮಿಲ್ಲರ್ ಬಾರ್'. ನನ್ನ ತಾತ ಹೆನ್ರಿ ಮಿಲ್ಲರ್ ಹಡಗಿನ ಮೂಲಕ ನಿಮ್ಮ ದೇಶದಲ್ಲಿ ವ್ಯಾಪಾರ ಬೆಳೆಸುತ್ತಾರೆ. ಅವರು ಭಾರತದಲ್ಲಿ ಮೊದಲ ಬಾರಿಗೆ ಕಳ್ಳಂಗಡಿ ವಹಿವಾಟು ಶುರು ಮಾಡಿದರು. ಮಿಲ್ಲರ್ ಬಾರ್ ಮುಂದೆ 'ಮಲಬಾರ್' ಎಂದಾಗುತ್ತದೆ' ಎಂದು ಆಕೆ ಕೊಚ್ಚಿಕೊಳ್ಳುತ್ತಾಳೆ.

ಬಾಸ್ಟೋನಿಯನ್ ಮಹಿಳೆಯರು ಆಧುನಿಕತೆಗೆ ಹೊಂದಿಕೊಳ್ಳುತ್ತಿಲ್ಲ ಎಂದು ಸ್ವಾಮಿ ಹೇಳಿದ್ದಾರೆ. ಅಮೆರಿಕದ ಸಂಸ್ಕೃತಿಗೆ ಕೇವಲ ನಾಲ್ಕು ನೂರು ವರ್ಷಗಳ ಇತಿಹಾಸವಿದೆ. ಸ್ವಾಮಿ ಅವರಿಗೆ ಆದ ಅನುಭವ ಅರವತ್ತು ವರ್ಷ ಹಳೆಯದು. ಈಗ ಅಲ್ಲಿ ಬಹಳಷ್ಟು ಬದಲಾವಣೆ ಆಗಿರಬಹುದು ಎಂದು ನಾನು ಭಾವಿಸುತ್ತೇನೆ.

ನನ್ನ ಮೆಚ್ಚಿನ ಕೃತಿಗಳಲ್ಲಿ ಒಂದಾದ ಡಾ. ಬಿ.ಜಿ.ಎಲ್. ಸ್ವಾಮಿಯವರ 'ಅಮೆರಿಕದಲ್ಲಿ ನಾನು' ಓದುಗರಿಗೆ ಅಹ್ಲಾದಕರ ಅನುಭವ ನೀಡಬಲ್ಲದು. ಸ್ವಾಮಿಯವರೇ ಬರೆದ ಇಲ್ಲಿನ ಚಿತ್ರಗಳು ಗಮನ ಸೆಳೆಯುತ್ತದೆ. ವಿನೋದದೊಂದಿಗೆ ಜ್ಞಾನ ಈ ಕೃತಿಯ ಹೆಚ್ಚುಗಾರಿಕೆ. ಅದು 'ಒಂದರ ಜೊತೆ ಇನ್ನೊಂದು ಉಚಿತ' ಎಂಬಂತೆ ಇದೆ. ಅ

***ಡಾ. ವೈ. ಅವನೀಂದ್ರನಾಥ್ ರಾವ್***



# ಹಲವು ಆಸಕ್ತಿಗಳನ್ನು ಬೆಳೆಸಿಕೊಂಡಿದ್ದ ಬಿ.ಜಿ.ಎಲ್. ಸ್ವಾಮಿ

**ಬಿಜಿಎಲ್. ಸ್ವಾಮಿ** ಶತಮಾನದ ನಮನ ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜುಲೈ 9ರಂದು ಜರುಗಿದ ಡಾ. ಬಿ.ಜಿ.ಎಲ್. ಸ್ವಾಮಿ ಜನ್ಮಶತಮಾನೋತ್ಸವ ಸಮಾರಂಭದಲ್ಲಿ **ಡಾ. ಎಚ್.ಎಸ್. ಸತ್ಯನಾರಾಯಣ** ಅವರು ಮಾಡಿದ ಭಾಷಣದ ಲೇಖನ ರೂಪ.

'ಶತಮಾನೋತ್ಸವಗಳು' ನಮ್ಮ ಅಪೂರ್ವ ಬರಹಗಾರರನ್ನು ನೆನಪಸಿಕೊಳ್ಳುವ, ಅವರ ಕೃತಿಗಳನ್ನು ಮರು ಓದಿಗೆ ಒಳಪಡಿಸುವ, ಹೊಸ ವಿಮರ್ಶೆಯ ಪರಿಪೇಕ್ಷದಿಂದ ಪರಿಶೀಲಿಸುವ, ಹೊಸ ತಲೆಮಾರಿನ ಓದುಗರ ಗಮನವನ್ನು ಪರಂಪರೆ ನಿರ್ಮಾತೃಗಳತ್ತ ಬೆಸೆಯಲು ಇರುವ ಅಪರೂಪದ ಸಂದರ್ಭವನ್ನು ಸೃಷ್ಟಿಮಾಡಿಕೊಡುವ ಅವಕಾಶ ಕಲ್ಪಿಸುವುದರಿಂದ, ಶತಮಾನದ ಆಚರಣೆಗೆ ಸದಾ ಅರ್ಥವ್ಯಾಪ್ತಿಯು ತಾನಾಗಿಯೇ ಒದಗಿಬರುತ್ತದೆ. ಬಿ.ಜಿ.ಎಲ್. ಸ್ವಾಮಿ, ಎಂ. ಗೋಪಾಲಕೃಷ್ಣ ಅಡಿಗ, ಎಂ.ಕೆ. ಇಂದಿರಾ, ವಾಣಿ, ದೇ. ಜವರೇಗೌಡ ಮುಂತಾದವರು ಶತಮಾನದ ನೆಪದಲ್ಲಿ ಕನ್ನಡಿಗರ ಸ್ಮರಣೆಯಲ್ಲಿ ಬಂದು ನಿಂತಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಕಳೆದ ವರ್ಷವೇ ಬಿ.ಜಿ.ಎಲ್. ಸ್ವಾಮಿಯವರ 'ಶತಮಾನೋತ್ಸವ' ಆಚರಿಸಿ ನಗೆಪಾಟಲಿಗೀಡಾಯ್ತು! ಸ್ವಾಮಿಯಂತಹ ಲೇಖಕರ ಬಗೆಗೆ ಸರಿಯಾದ ದಾಖಲೆಗಳನ್ನು ಪರಿಶೀಲಿಸಲು ಹೋಗದ ಉದಾಸೀನತೆ ಇದು. ಕೆಲವು ಕಡೆ ಸ್ವಾಮಿ ಜನಿಸಿದ್ದು 1916ರಲ್ಲಿ ಎಂದು ತಪ್ಪಾಗಿ ಉಲ್ಲೇಖಿತಗೊಂಡಿರುವುದು ಈ ಪ್ರಮಾದಕ್ಕೆ ಕಾರಣವಿರಬಹುದು. ಸ್ವಾಮಿಯವರೆ ಫೆಬ್ರವರಿ 5, 1918 ಎಂದು ಬರೆದುಕೊಂಡಿರುವುದನ್ನು ಗಮನಿಸಬಹುದಾಗಿತ್ತು.

*ಹೊಸಗನ್ನಡದ ಆಚಾರ್ಯ ಪುರುಷರಲ್ಲೊಬ್ಬರೆನಿಸಿದ ಡಿ.ವಿ.ಜಿ. ಯವರ ಪುತ್ರರಾದ ಸ್ವಾಮಿ ಐದು ವರ್ಷದ ಬಾಲಕನಾಗಿರುವಾಗಲೇ ಬೆಂಕಿ ಆಕಸ್ಮಿಕದಲ್ಲಿ ತಾಯಿ ಶ್ರೀಮತಿ ಭಾಗೀರಥಮ್ಮನವರ ಪ್ರೀತಿ–ವಾತ್ಸಲ್ಯಗಳನ್ನು ಕಳೆದುಕೊಂಡಿದ್ದರಿಂದ ಅಜ್ಜಿ–ಅತ್ತೆಯರ ಆಶ್ರಯದಲ್ಲಿ ಬೆಳೆಯಬೇಕಾಯಿತು.*

ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ್ದ ಸಸ್ಯ ವಿಜ್ಞಾನಿಯಾಗಿದ್ದ ಸ್ವಾಮಿಯವರು 'ಸರ್ವಕುತೂಹಲಿ' ಎಂದು ಬಣ್ಣಿಸಲ್ಪಟ್ಟ ಬಹುಶ್ರುತ ಲೇಖಕ. ಡಾ. ಉಮಾಶಂಕರ ಜೋಶಿಯವರ ಮಾತಿನಲ್ಲಿ ಹೇಳುವುದಾದರೆ 'ಪ್ರಸಿದ್ಧ ತಂದೆಯ ಪ್ರಸಿದ್ಧ ಮಗ'. ಸ್ವಾಮಿ, ತೇಜಸ್ವಿ, ಉಲ್ಲಾಸ ಕಾರಂತ ಮುಂತಾದವರೆಲ್ಲ ತಮ್ಮ ತಮ್ಮ ತಂದೆಯವರಿಗಿದ್ದ ಪ್ರಸಿದ್ಧತೆಯ ಪ್ರಭಾವಳಿಯಿಂದ ಪಾರಾಗಿ ಸ್ವಂತ ಅಸ್ಮಿತೆಯನ್ನು ದಾಖಲಿಸಿದವರು. ಹೊಸಗನ್ನಡದ ಆಚಾರ್ಯ ಪುರುಷರಲ್ಲೊಬ್ಬರೆನಿಸಿದ ಡಿ.ವಿ.ಜಿ. ಯವರ ಪುತ್ರರಾದ ಸ್ವಾಮಿ ಐದು ವರ್ಷದ ಬಾಲಕನಾಗಿರುವಾಗಲೇ ಬೆಂಕಿ ಆಕಸ್ಮಿಕದಲ್ಲಿ ತಾಯಿ ಶ್ರೀಮತಿ ಭಾಗೀರಥಮ್ಮನವರ ಪ್ರೀತಿ–ವಾತ್ಸಲ್ಯಗಳನ್ನು ಕಳೆದುಕೊಂಡಿದ್ದರಿಂದ ಅಜ್ಜಿ–ಅತ್ತೆಯರ ಆಶ್ರಯದಲ್ಲಿ ಬೆಳೆಯಬೇಕಾಯಿತು. ಪತ್ನಿ ವಿಯೋಗದ ದುಃಖವನ್ನು ನೂರಾರು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಮುಖೇನ ನೀಗಿಕೊಂಡ ಗುಂಡಪ್ಪನವರು ಮರುಮದುವೆಯ ಬಗ್ಗೆ ಯೋಚಿಸಲಿಲ್ಲವಾದರೂ ಮಗನ ಬಗ್ಗೆ ಕಾಳಜಿ ವಹಿಸಲು ಸಮಯ ಮಾಡಿಕೊಂಡದ್ದೂ ಅಪರೂಪವೆ. ಮನೆಯಲ್ಲೇ ಗ್ರಂಥಭಂಡಾರವಿದ್ದುದರಿಂದ ಬಿಡುವು ಸಿಕ್ಕಾಗ ಮಗನಿಗೆ ಈ ಪುಸ್ತಕ ಓದು, ಆ ಪುಸ್ತಕ ಓದು ಎಂದು ತಾಕೀತು ಮಾಡುತ್ತಿದ್ದುದಲ್ಲದೆ, ಮುಂದಿನ ಬಿಡುವಿನಲ್ಲಿ ತಾವು ಹೇಳಿದ ಪುಸ್ತಕಗಳನ್ನು ಓದಿದ್ದಾರೋ ಇಲ್ಲವೋ ಎಂದು ಪರೀಕ್ಷಿಸಲು ಆಯಾ ಕೃತಿಗಳ ಬಗ್ಗೆ ಪ್ರಶ್ನಿಸಿ, ಸಮಾಧಾನಪಟ್ಟುಕೊಳ್ಳುತ್ತಿದ್ದರಂತೆ ಡಿ.ವಿ.ಜಿ.! ತಂದೆ ಶೇಖರಿಸಿದ್ದ ರಾಶಿ ರಾಶಿ ಕೃತಿಶ್ರೇಣಿ ಸ್ವಾಮಿಯವರ ವಿಪುಲವಾದ ಸಾಹಿತ್ಯದ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿತು. ಸ್ವಾಮಿಯವರ ಸಕಲ ವಿದ್ಯಾರ್ಜನೆಯೂ ಅವರ ಸ್ವಂತ ಪರಿಶ್ರಮದ ಫಲವೇ ಆಗಿದೆ. ಒಂದು ರೀತಿಯಲ್ಲಿ ಸ್ವಯಮಾಚಾರ್ಯ ಅಥವಾ ಏಕಲವ್ಯ ಪ್ರತಿಭೆ. ಇದರ ಜೊತೆಗೆ ಮನೆಯ ಸಾಹಿತ್ಯದ ವಾತಾವರಣ, ವಿದ್ವಾಂಸರ ಭೇಟಿ, ಸಾಹಿತಿ, ಕಲಾವಿದರುಗಳ ಭೇಟಿಯು ಸ್ವಾಮಿಯವರ ವ್ಯಕ್ತಿತ್ವವನ್ನು ರೂಪಿಸಿತ್ತೆನ್ನಬಹುದು.

ಸ್ವಾಮಿಯವರಾಗಲಿ, ಇವರ ಬದುಕು–ಬರಹದ ಬಗ್ಗೆ ಪುಸ್ತಕ ಪ್ರಕಟಿಸಿರುವ ಇತರ ಲೇಖಕರಾಗಲೀ ಅವರ ಬಾಲ್ಯದ ವಿವರಗಳನ್ನು ಹೆಚ್ಚಾಗಿ ದಾಖಲಿಸಿಲ್ಲ. ಅ.ರಾ. ಮಿತ್ರ ಅವರು ಹೇಳಿರುವಂತೆ ಹೈಸ್ಕೂಲಿನಲ್ಲಿ 'ಜಗಳಗಂಟಿ' ಎಂದೇ ಪ್ರಸಿದ್ಧರಾಗಿದ್ದ ಸ್ವಾಮಿ ಚರ್ಚೆ ಮಾಡದೆ ಯಾವುದನ್ನೂ ಒಪ್ಪಿಕೊಳ್ಳುತ್ತಿರಲಿಲ್ಲವಂತೆ. ಒಬ್ಬ ವಿಜ್ಞಾನಿಯಾದವನಿಗಿರಬೇಕಾದ ಮೂಲ ಗುಣವೆ ಇದಲ್ಲವೆ? ಒರಟುತನ ಚಿಕ್ಕಂದಿನಲ್ಲೆ ರೂಢಿಗತವಾಗಿತ್ತಲ್ಲದೆ ಹೆಚ್ಚಾಗಿ ತಿನ್ನದಿರುವುದು, ಮಲಗಲು ಹಾಸಿಗೆ–ಹೊದಿಕೆಗಳನ್ನು ಬಳಸದಿರುವುದು, ನಾಜೂಕಿನ ಬಟ್ಟೆಗಳನ್ನು ಧರಿಸದಿರುವುದು–ಈ ಮುಂತಾದ ಸರಳತನಗಳನ್ನು ಎಳವೆಯಲ್ಲೇ ರೂಢಿಸಿಗೊಂಡು ಕೊನೆಯವರೆಗೂ ಪಾಲಿಸಿದರು. ಅ.ರಾ. ಮಿತ್ರ ಅವರು ಮತ್ತೊಂದು ತಮಾಷೆಯ ಪ್ರಸಂಗವನ್ನು ಆಗಾಗ ಹೇಳುತ್ತಿದ್ದರು. ಅದೆಂದರೆ "ನಿನ್ನ ಮುಖ ಒಬ್ಬ ಕೊಲೆಗಾರನ ಮುಖವನ್ನು ಅಭಿವ್ಯಕ್ತಿಸುವಂತಿದೆ" ಎಂದು ಡಿ.ವಿ.ಜಿ. ಒಮ್ಮೆ ಛೇಡಿಸಿದಾಗ, ಸ್ವಾಮಿಯವರು "ಇದು ನನ್ನ ತಪ್ಪಲ್ಲ, ಈ ಮಡಿಕೆ ಮಾಡಿದ ಕುಂಬಾರನ ತಪ್ಪು" ಎಂದು ತಮ್ಮ ವಿಧಾತನನ್ನೇ ಲೇವಡಿ ಮಾಡಿದ್ದರಂತೆ. ಇದಕ್ಕೆ ಸೇರಿಸಬಹುದಾದ ಇನ್ನೊಂದು ಪ್ರಸಂಗವೆಂದರೆ, ಸ್ವಾಮಿಯವರ ಒರಟುತನದಿಂದ ಬೇಸತ್ತ ಗುಂಡಪ್ಪನವರೊಮ್ಮೆ "ಸ್ವಲ್ಪ ನಯ–ನಾಜೂಕಿನ ನಡವಳಿಕೆಯನ್ನು ರೂಢಿಸಿಕೊಳ್ಳಬಾರದೆ?" ಎಂದಿದ್ದಕ್ಕೆ ಸ್ವಾಮಿ "ಅದನ್ನೆಲ್ಲಾ ನೀವೇ ರೂಢಿಸಿಕೊಳ್ಳಿ. ಏಕೆಂದರೆ ನೀವಿರೋದು ಜನಕ್ಕಾಗಿ–ನಾನಿರೋದು ಗಿಡಕ್ಕಾಗಿ" ಎಂದು ಹಾಸ್ಯ ಮಾಡಿದ್ದನ್ನು ಸ್ವಾಮಿಯವರ ಶಿಷ್ಯರಾಗಿದ್ದ ಚಿಕ್ಕಮಗಳೂರಿನ ದೇಶಮುಖ್ ಎಂಬುವವರು ಒಮ್ಮೆ ನನ್ನೊಂದಿಗೆ ಹೇಳಿದ್ದರು.

ಸಸ್ಯವಿಜ್ಞಾನ ಮತ್ತು ಬರವಣಿಗೆಯ ಜೊತೆ ಜೊತೆಯಲ್ಲೆ ಇನ್ನೂ ಹಲವು ಆಸಕ್ತಿಗಳು

ಸ್ವಾಮಿಯವರ ವ್ಯಕ್ತಿತ್ವದಲ್ಲಿ ಬೆರೆತು ಹೋಗಿದ್ದವು. ಅವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಪ್ರಸ್ತಾಪಿಸುವುದಾದರೆ ಚಿತ್ರಕಲಾಸಕ್ತಿ ಮತ್ತು ಸಂಗೀತ. ಈಗಲೂ ಸ್ವಾಮಿಯವರ ಕೃತಿಗಳಲ್ಲಿ ಇರುವ ಎಷ್ಟೋ ರೇಖಾಚಿತ್ರಗಳು ಅವರು ನಿರೂಪಿಸುತ್ತಿರುವ ವಿಚಾರಗಳ ಪರಿಣಾಮಕಾರಿ ಭಾವ ಸಂವೇದ್ಯಕ್ಕೆ ನೆರವಾಗುತ್ತವೆ. ಉದಾಹರಣೆಗೆ, 'ಅಮೆರಿಕಾದಲ್ಲಿ ನಾನು'ಕೃತಿಯ ಆರಂಭದಲ್ಲೇ ಹಡಗಿನ ಪ್ರಯಾಣದಲ್ಲಿ ಎದುರಿಸಿದ ಶೌಚಾಲಯ ಪ್ರಸಂಗಗಳ ರೇಖಾಚಿತ್ರಗಳನ್ನು ನೆನಪಿಸಿಕೊಳ್ಳಿ, ನಗೆಯ ಬುಗ್ಗೆಯನ್ನು ಆ ರೇಖಾಚಿತ್ರಗಳು ಓದುಗರ ಮೊಗದಲ್ಲಿ ಅರಳಿಸುತ್ತವೆ. ತಾವು ಇಂಟರ್‌ಮೀಡಿಯೆಟ್ ಓದುತ್ತಿರುವಾಗಲೇ ಕಲಾಮಂದಿರದ ಅ.ನ. ಸುಬ್ಬರಾಯರಿಂದ ಚಿತ್ರರಚನೆಗಾಗಿ ವಿಶೇಷ ಬಹುಮಾನದ ಮೆಚ್ಚುಗೆ ಪಡೆದಿದ್ದ ಸ್ವಾಮಿ ಡಿ.ವಿ.ಜಿ. ಯವರ ಭೇಟಿಗೆ ಮನೆಗೆ ಬರುತ್ತಿದ್ದ ಶಿವರಾಮ ಕಾರಂತರೊಡನೆ ಚಿತ್ರಕಲೆಗೆ ಸಂಬಂಧಿಸಿದ ಅನೇಕ ವಿವರಗಳನ್ನು ಚರ್ಚಿಸುತ್ತಿದ್ದರು. ಕಾರಂತರ ಚಿತ್ರಕಲಾಸಕ್ತಿ ಎಲ್ಲರಿಗೂ ತಿಳಿದಿರುವಂತದ್ದೆ. ಅವರು ಸ್ವಾಮಿಯವರಿಗೆ ಜಪಾನೀಯರು ಮರದ ಅಚ್ಚುಗಳಿಂದ ವಿವಿಧ ವರ್ಣಚಿತ್ರಗಳನ್ನು ಮುದ್ರಿಸುತ್ತಿದ್ದ ಬಗ್ಗೆ, ಪಾಶ್ಚಾತ್ಯರಿಗಿಂತ ಭಿನ್ನವಾಗಿ ಕಾಗದಗಳ ಮೇಲೆ ಜಲವರ್ಣಗಳನ್ನು ಬಳಸುತ್ತಿದ್ದ ಬಗ್ಗೆ ವಿವರಿಸಿದರೆ, ಮುಂದಿನ ಭೇಟಿಯ ಹೊತ್ತಿಗೆ ಸ್ವಾಮಿ ಆ ಬಗೆಗಿನ ತಮ್ಮ ಪ್ರಯೋಗಗಳನ್ನು ಕಾರಂತರೆದರು ಪ್ರದರ್ಶಿಸಿ, 'ಭೇಷ್' ಅನ್ನಿಸಿಕೊಳ್ಳುತ್ತಿದ್ದರು. ಮುಂದೆ ಗೊರೂರರ 'ಪಾಶ್ಚಾತ್ಯರ ಪುರಾತನ ಕತೆಗಳು' ಪುಸ್ತಕಕ್ಕೆ ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದ ಸ್ವಾಮಿ ಚಿತ್ರಗಳನ್ನು ಬರೆದುಕೊಟ್ಟಿದ್ದೂ ದಾಖಲೆಯಾಗಿದೆ.

ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ರಚಿಸಿದ ಹಲವು ವರ್ಣಚಿತ್ರಗಳನ್ನು ವಿ.ಸೀ. ಅವರಿಗೆ ತೋರಿಸಿದಾಗ ಅವರು ಅದರಲ್ಲಿನ ದೋಷಗಳನ್ನು ತಿಳಿಸಿ, ಚಿತ್ರಾಸಕ್ತಿಯನ್ನು ತಿದ್ದಿ ತೀಡಿದರಂತೆ. ಅಮೇರಿಕಾದಲ್ಲಿ ಸಸ್ಯಶಾಸ್ತ್ರ ಓದಿನ ನಡುವೆ ಬಿಡುವು ಮಾಡಿಕೊಂಡು ಕಾರ್ಟೂನ್ ರಚನೆಯ ಆರು ವಾರಗಳ ಕೋರ್ಸ್ ಪಡೆದರಲ್ಲದೆ, ಮುಂದೆ ಮದರಾಸಿನಲ್ಲಿರುವಾಗ ಸಸ್ಯದ ಅಂಗಾಂಗಳನ್ನು ತೀರಾ ತೆಳುವಾದ ಪೊರೆಗಳಾಗಿ ಕತ್ತರಿಸಿ, ಸೂಕ್ಷ್ಮದರ್ಶಕದಲ್ಲಿಟ್ಟು ನೋಡಿದಾಗ ಕಂಡು ಬರುವ ಚಿತ್ರ ವಿಚಿತ್ರವಾದ ಅಸಂಖ್ಯಾತ ನಕಾಶೆಗಳನ್ನು ದೈನಂದಿನ ಜೀವನದ ಅಂದ-ಚೆಂದ ಅಲಂಕಾರಗಳಿಗೆ ಅಣಿಗೊಳಿಸಿಕೊಳ್ಳುವ ಬಗೆಯನ್ನು ಸ್ವಂತ ಚಿತ್ರ ಪ್ರದರ್ಶನದ ಮೂಲಕ ತೋರಿಸಿಕೊಟ್ಟು ಮೆಚ್ಚುಗೆಗೆ ಪಾತ್ರರಾಗಿದ್ದೂ ಇದೆ. ಸ್ವಾಮಿಯವರ ಚಿತ್ರಗಳು ಅವರ ಮಾರ್ಗದರ್ಶಕರಾಗಿದ್ದ ಪ್ರೊ. ಇರ್ವಿಂಗ್ ಬೈಲಿಯೆ ಅವರ ಮನಸೂರೆಗೊಂಡಿದ್ದವು. ತಮ್ಮ ನೆನಪಿಗಿರಲೆಂದು ಬರೆದುಕೊಟ್ಟಿದ್ದ ಯಕ್ಷಗಾನಕ್ಕೆ ಸಂಬಂಧಿಸಿದ ಒಂದೂವರಡಿ ಅಳತೆಯ ಚಿತ್ರವೊಂದನ್ನು ಜಿ.ಎಚ್. ನಾಯಕರು ಮನೆಯಲ್ಲಿ ಪ್ರೀತಿ-ಗೌರವಗಳಿಂದ ನೇತು ಹಾಕಿಕೊಂಡಿದ್ದಾರೆ. 1947ರ ಅವಧಿಯಲ್ಲಿ ಪ್ಯಾರಿಸ್‌ಗೆ ಹೋಗಿದ್ದಾಗಲೂ ಬ್ರೆಟನ್, ಡಾಲಿ ಮುಂತಾದ ಕಲಾವಿದರೊಂದಿಗೆ ಚಿತ್ರಕಲೆಯ ವಿಚಾರ ಚರ್ಚೆ ನಡೆಸಿದ್ದ ಸ್ವಾಮಿ, ಮದರಾಸಿನಲ್ಲಿರುವಾಗ ಆರ್ಟ್ ಲಿಪ್ರಿಸಿಯೇಷನ್ ಕ್ಲಬ್ ಎಂಬ ಕಲಾ ಸಂಸ್ಥೆಯನ್ನು ಸ್ಥಾಪಿಸಿದ್ದರೆಂಬುದನ್ನು ಇಲ್ಲಿ ಸ್ಮರಿಸಬಹುದು.

ಇನ್ನು ಚಿಕ್ಕಂದಿನಲ್ಲೇ ತಮ್ಮ ಅಜ್ಜಿಯಿಂದ ಸಂಗೀತಾಸಕ್ತಿ ಒಡಮೂಡಿತೆಂಬುದಾಗಿ ಸ್ವಾಮಿಯವರೇ ಒಂದೆಡೆ ಬರೆದುಕೊಂಡಿದ್ದಾರೆ. ಹೈಸ್ಕೂಲಿನಲ್ಲಿರುವಾಗಲೇ ಮೂವತ್ತು ರೂಪಾಯಿಗೆ ಸೆಕೆಂಡ್ ಹ್ಯಾಂಡ್ ಪಿಟೀಲೊಂದನ್ನು ಕೊಂಡು ತಂದು ತಾವೇ ಆರಂಭಿಕ ಪಾಠಗಳ ಅಭ್ಯಾಸಕ್ಕೆ ತೊಡಗಿದ್ದರಂತೆ. ಡಿ.ವಿ.ಜಿ. "ಇವೆಲ್ಲ ಗುರುಮುಖೇನ ಕಲಿಯಬೇಕಾದ ವಿದ್ಯೆಗಳು. ಯಾರ ಹತ್ತಿರವಾದರೂ ಪಾಠ ಹೇಳಿಸಿಕೋ" ಎಂದು ತಿಳಿಯ ಹೇಳಿ ರತ್ನಗಿರಿ ಸುಬ್ಬಾ ಶಾಸ್ತ್ರಿಗಳ ಬಳಿ, ಅನಂತರ ನಾರಾಯಣಸ್ವಾಮಿ ಭಾಗವತರ ಬಳಿ ಕಳಿಸಿದ್ದರು. ಮದರಾಸಿನಲ್ಲಿ ಘನ ಸಂಗೀತ ವಿದ್ವಾಂಸರ ಸಂಗೀತ ಕೇಳಿ, ಮೆಚ್ಚಿ, ಸಂಗೀತವಲ್ಲ ಒಳ್ಳೆಯ ಸಂಸ್ಕಾರ ಪಡೆದುದು ಮಾತ್ರವಲ್ಲ, ಕೆಲಕಾಲ 'ದಿ ಹಿಂದೂ' ಪತ್ರಿಕೆಗೆ ಸಂಗೀತ ವಿಮರ್ಶಕರು ಆಗಿದ್ದರು. ಕೆಮ್ಮಗುಂಡಿ ಲಾಲ್‌ಗುಡಿ, ಎಂ.ಡಿ. ರಾಮನಾಥನ್, ಬಾಲಮುರಳಿ ಕೃಷ್ಣ, ಸುಬ್ಬಲಕ್ಷ್ಮೀ ಮುಂತಾದವರೊಡನೆ ಕೀರ್ತನೆಗಳಲ್ಲಿನ ಪದಗಳ ಉಚ್ಚಾರಣೆ ಬಗ್ಗೆ ಚರ್ಚಿಸಿ, ಅವರ ಜ್ಞಾನವನ್ನು ವಿಸ್ತರಿಸುವ ಕೆಲಸ ಮಾಡಿದ್ದ ಸ್ವಾಮಿಯವರ ಪಿಟೀಲು ವಾದನವನ್ನು ನಮ್ಮ ಎಸ್. ಎಲ್. ಭೈರಪ್ಪನವರು ತುಂಬಾ ಮೆಚ್ಚಿಕೊಂಡಿದ್ದರಂತೆ. ಭೈರಪ್ಪನವರ ಬಳಿಯಿದ್ದ ಸಂಗೀತದ ರೆಕಾರ್ಡುಗಳಲ್ಲಿ ಯೆಹೂದಿ ಮೆನುಹಿನ್ನರ ಸಂಗೀತವನ್ನು ಸ್ವಾಮಿಯವರು ಪದೇ ಪದೇ ಕೇಳುತ್ತಿದ್ದರು. ಜೇಸುದಾಸ್, ಪಿ.ಬಿ. ಶ್ರೀನಿವಾಸ್ ಸ್ವಾಮಿಯವರ ಮೆಚ್ಚಿನ ಗಾಯಕರು. ಸ್ವಾಮಿಯವರ ಪಿಟೀಲು ತಂದ ಫಜೀತಿಗಳನ್ನು ಅವರ 'ಮೈಸೂರು ಡೈರಿ'ಯಲ್ಲೇ ಓದಿ ಸವಿಯಬೇಕು.

> **'ಅಮೆರಿಕಾದಲ್ಲಿ ನಾನು'ಕೃತಿಯ ಆರಂಭದಲ್ಲೇ ಹಡಗಿನ ಪ್ರಯಾಣದಲ್ಲಿ ಎದುರಿಸಿದ ಶೌಚಾಲಯ ಪ್ರಸಂಗಗಳ ರೇಖಾಚಿತ್ರಗಳನ್ನು ನೆನಪಿಸಿಕೊಳ್ಳಿ, ನಗೆಯ ಬುಗ್ಗೆಯನ್ನು ಆ ರೇಖಾಚಿತ್ರಗಳು ಓದುಗರ ಮೊಗದಲ್ಲಿ ಅರಳಿಸುತ್ತವೆ. ತಾವು ಇಂಟರ್‌ಮೀಡಿಯೆಟ್ ಓದುತ್ತಿರುವಾಗಲೇ ಕಲಾಮಂದಿರದ ಅ.ನ. ಸುಬ್ಬರಾಯರಿಂದ ಚಿತ್ರರಚನೆಗಾಗಿ ವಿಶೇಷ ಬಹುಮಾನದ ಮೆಚ್ಚುಗೆ ಪಡೆದಿದ್ದ ಸ್ವಾಮಿ ಡಿ.ವಿ.ಜಿ. ಯವರ ಭೇಟಿಗೆ ಮನೆಗೆ ಬರುತ್ತಿದ್ದ ಶಿವರಾಮ ಕಾರಂತರೊಡನೆ ಚಿತ್ರಕಲೆಗೆ ಸಂಬಂಧಿಸಿದ ಅನೇಕ ವಿವರಗಳನ್ನು ಚರ್ಚಿಸುತ್ತಿದ್ದರು.**

ವಿದೇಶದಲ್ಲಿದ್ದಾಗ ಸ್ವಾಮಿಯವರು ಟಾಪ್‌ಡಾನ್ಸ್ ಅಭ್ಯಾಸ ಮಾಡಿದ್ದರಂತೆ. ಶಾಸ್ತ್ರೀಯ ನೃತ್ಯ ಅರಿವಿದ್ದ ಕಾರಣ ಮೈಸೂರಿನಲ್ಲಿದ್ದಾಗ ತೇಜಸ್ವಿಯರ ಮಗಳು ಸುಸ್ಮಿತಾ ಮತ್ತು ಬಿ.ಜಿ.ಎಲ್. ನಾಯಕರ ಮಗಳು ಕೀರ್ತಿಗೆ ವಾರಕ್ಕೊಮ್ಮೆ ನೃತ್ಯ ಹೇಳಿಕೊಡಲು ಒಪ್ಪಿದ್ದರಂತೆ! ಕಸೂತಿಯು ಬರುತ್ತಿತ್ತು. ಮಾತ್ರವಲ್ಲ ಶ್ರೀರಾಮನವಮಿ ಉತ್ಸವದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸುವ ಉತ್ಸಾಹ. ಇವೆಲ್ಲವೂ ಅವರ ಜೀವನಪ್ರೀತಿಯನ್ನು ಎತ್ತಿತೋರಿಸುವ ಸಂದರ್ಭಗಳು.

ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಬಿ.ಎಂ.ಶ್ರೀ, ಎ.ಆರ್. ಕೃಷ್ಣಶಾಸ್ತ್ರಿಯವರಂತಹ ಘನ ವಿದ್ವಾಂಸರ ನೇತೃತ್ವದಲ್ಲಿ ಮುನ್ನಡೆಯುತ್ತಿದ್ದಾಗ ವಿದ್ಯಾರ್ಥಿಯಾಗಿದ್ದ ಸ್ವಾಮಿಯವರ ಅನುಭವ ಚಿತ್ರಗಳನ್ನು ರಾಜರತ್ನಂ 'ಪಂಚಕಲಶ ಗೋಪುರ' ಎಂಬ ಕೃತಿಯ ಮೂಲಕ ಬೆಳಕಿಗೆ ತಂದಿದ್ದಾರೆ. ನಿಜಕ್ಕೂ ಇದೊಂದು ಅಪೂರ್ವ ವ್ಯಕ್ತಿಚಿತ್ರಗಳ ಕೃತಿ. ಕನ್ನಡಿಗರೆಲ್ಲರೂ ಓದಲೇಬೇಕಾದ ಸ್ವಾಮಿಯವರ ಬರಹ. ಆಧುನಿಕ ಕನ್ನಡದ ಮಹಾ ಪರಂಪರೆಯನ್ನು ನಿರ್ಮಿಸಿದವರಲ್ಲಿ ಮುಖ್ಯರಾದ ಬೆಳ್ಳಾವೆ ವೆಂಕಟಪ್ಪ, ಟಿ.ಎಸ್. ವೆಂಕಣಯ್ಯ, ಬಿ.ಎಂ.ಶ್ರೀ, ಎ.ಆರ್.ಕೃ., ವಿ.ಸೀ. ಮುಂತಾದ ಐವರು ದಿಗ್ಗಜರೇ ಈ ಪಂಚಕಲಶಗಳು. ಇವರುಗಳ ವ್ಯಕ್ತಿತ್ವವನ್ನು ಸೂಕ್ಷ್ಮ ಗ್ರಹಿಕೆಯ ಸ್ವಾಮಿ ಅನನ್ಯವೆಂಬಂತೆ ಚಿತ್ರಿಸಿದ್ದಾರೆ. ಬಿ.ಎಂ.ಶ್ರೀಯವರ ಕನ್ನಡದ ಕೆಲಸಗಳ ಬಗ್ಗೆ ಹೇಳುತ್ತಲೇ ಅವರ ಭಾಷಣ ಚಪಲಚಿತ್ತತೆಯನ್ನು ಸ್ವಾಮಿ ಸೊಗಸಾಗಿ ಚಿತ್ರಿಸಿದ್ದಾರೆ. ಬಿ.ಎಂ.ಶ್ರೀ ಇಂಗ್ಲಿಷ್ ಗೀತೆಗಳನ್ನು ಹೊರತಂದಾಗ ಬೆಳ್ಳಾವೆಯವರು 'ಅವಳ ತೊಡುಗೆ ಇವಳಿಗಿಟ್ಟು' ಎಂಬ ರಚನೆಯನ್ನು 'ಅವಳ ಚಡ್ಡಿ ಇವಳಿಗಿಟ್ಟು ಇವಳ ಲಂಗ ಅವಳಿಗಿಟ್ಟು ಹಾಡು ಬೇರೆ ಹಾಡೋದೇಕೆ' ಎಂದು ಲೇವಡಿ ಮಾಡಿದ ಸಂದರ್ಭವೂ ಇಲ್ಲಿ ದಾಖಲಾಗಿದೆ. ಕೆಲವು ಪದ್ಯಗಳನ್ನು ಮೂಲಕ್ಕಿಂತಲೂ ಸೊಗಸಾಗಿ ಅನುವಾದ ಮಾಡಿರುವ ಬಗ್ಗೆ ಡಿವಿಜಿಯವರ ಮೆಚ್ಚುಗೆಯೂ ಇದೆ. ಟಿ.ಎಸ್. ವೆಂಕಣಯ್ಯನವರ ಸಂಗೀತಾಸ್ವಾದದ ಧ್ಯಾನಸ್ಥ ಸ್ಥಿತಿಯ ಬಗ್ಗೆ ಸ್ವಾಮೀಜಿಯವರ ಬರಹ ಮತ್ತು ರೇಖಾಚಿತ್ರ ಎಲ್ಲ ಅರ್ಥದಲ್ಲಿಯೂ ಅದ್ಭುತ. ವಿ.ಸೀ. ಕನ್ನಡ ಪಾಠವನ್ನು ಇಂಗ್ಲಿಷಿನಲ್ಲಿ ಬೋಧಿಸುತ್ತಿದ್ದುದು, ಟೀ ಕುಡಿಯುವ ಶಿಸ್ತು, ರುಮಾಲಿನ ಬಗ್ಗೆ ಎ.ಆರ್. ಕೃಷ್ಣ ಶಾಸ್ತ್ರಿಗಳ ಬೋಧನೆಯ ವೈಖರಿ-ಮುಂತಾದವನ್ನು ಓದಿಯೇ ಸವಿಯಬೇಕು.

ಸ್ವಾಮಿಯವರನ್ನು ಸಸ್ಯಶಾಸ್ತ್ರದತ್ತ ಹೊರಳಿಸಿದವರಲ್ಲಿ ಎ.ಆರ್. ಕೃಷ್ಣಶಾಸ್ತ್ರೀಗಳು ಮುಖ್ಯರು. ಆರಂಭದಲ್ಲಿ ಸ್ವಾಮಿಯವರಿಂದ ಸಸ್ಯಗಳ ಬಗ್ಗೆ ಬರೆಸಿ ಅದನ್ನು ತಾವು ಸಂಪಾದಿಸುತ್ತಿದ್ದ ಕನ್ನಡ ನುಡಿಯಲ್ಲಿ ಪ್ರಕಟಿಸುತ್ತಿದ್ದರು. ಇದು ಹಲವಾರು ಲೇಖನಗಳ ರಚನೆಗೆ ಪ್ರೋತ್ಸಾಹಕವಾಗಿ ಸ್ವಾಮಿ ಅಮೆರಿಕಕ್ಕೆ ಬರುವಷ್ಟರಲ್ಲಿ ಅವರ ಹೆಸರು ಸಸ್ಯಶಾಸ್ತ್ರ ಲೋಕದಲ್ಲಿ ಚಿರಪರಿಚಿತವಾಗಿತ್ತು. ಸ್ವಾಮಿಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಗೌರವ ತಂದಿತ್ತ 'ಹಸಿರು ಹೊನ್ನು' ಕನ್ನಡದ ಅಮರ ಕೃತಿಗಳಲ್ಲೊಂದೆನಿಸಿದೆ. ಮದರಾಸಿನಲ್ಲಿ ಬೋಧಿಸುವಾಗ ತಮ್ಮ ವಿದ್ಯಾರ್ಥಿಗಳೊಂದಿಗೆ ಕ್ಷೇತ್ರಕಾರ್ಯಕ್ಕೆ ಹೋದಾಗಿನ ಅನುಭವಗಳ ಚಿತ್ರ ಇಲ್ಲಿದೆ. ಇದು ಏಕಕಾಲಕ್ಕೆ ಸಸ್ಯಶಾಸ್ತ್ರದ ಕೃತಿಯಾಗಿಯೂ ಪ್ರವಾಸಕಥನವಾಗಿಯೂ ಮೈದಳೆದ ಕೃತಿ. ಮಾತ ಮೊದಲಿಸುವ ಮಹಾರಾಣ್ಯ, ಸರಣಿ, ಮರಕತಮಯ ಸಿಂಗರ, ಪ್ರಕೃತಿಯ ನರ್ತನರಂಗಂ, ಪಸುರ ಕಡಲ್- ಎಂಬ ಅಧ್ಯಾಯಗಳಲ್ಲಿ ಆಗುಂಬೆ ಸಹ್ಯಾದ್ರಿಶ್ರೇಣಿ, ಕೇರಳದ ತೆಕ್ಕಡಿ, ತಿರುವಾಂಕುರು ಪ್ರದೇಶದ ಹಸುರು ಹೊನ್ನಾಗಿರುವ, ಹೊನ್ನು ಹಸಿರಾಗಿರುವ ಪರಿಯನ್ನು ಸ್ವಾಮಿ ಹಿಡಿದಿಟ್ಟಿದ್ದಾರೆ. ಸಸ್ಯಗಳು, ಅವುಗಳ ಸ್ವರೂಪ, ಅವುಗಳ ಗುಣ, ಉಪಯೋಗ, ಅವುಗಳಿಗೆ ಸಂಬಂಧಿಸಿದ ಚರಿತ್ರೆ, ಭೂಗೋಳ, ಸಮಾಜ ಶಾಸ್ತ್ರ, ಜಾನಪದ ಎಲ್ಲದರ ವಿವರಗಳೂ ಈ ಕೃತಿಯಲ್ಲಿ ಮೂಡಿರುವ ಬಗೆ ಸ್ವಾಮಿಯವರ ಬಹುಶ್ರುತತೆಯನ್ನು ನಿರೂಪಿಸುವದರೊಂದಿಗೆ ಅವರ ಹಸಿರು ಪ್ರೀತಿಯ ಪತಾಕೆಯನ್ನು ಹಾರಿಸಿದೆ. ಈ ಕೃತಿಯ ಓದಿಗೆ ವಿಜ್ಞಾನದ ಪರಿಚಯ ಅಗತ್ಯವೇ ಇಲ್ಲ. ಅಕ್ಷರ ಬಲ್ಲವರೆಲ್ಲ ಓದಿ ಸುಖಿಸಬಹುದಾದ ಪುಸ್ತಕವಿದು. ಒಮ್ಮೆ ಓದಿದರೂ ನಮ್ಮ ಸುತ್ತಮುತ್ತಲ ಸಸ್ಯಗಳ ಪರಿಚಯ ಮಾಡಿಕೊಳ್ಳುವ ಕುತೂಹಲಕ್ಕೆ ಪ್ರೇರೇಪಿಸುವ ಅಸಾಧಾರಣ ಕೃತಿಯಿದು.

ಶತಮಾನದ ಸಂದರ್ಭದಲ್ಲಿ ಕನ್ನಡಿಗರು ಸ್ವಾಮಿಯವರ ಕೃತಿಗಳನ್ನು ಪುನರ್ ಮನನ ಮಾಡಲಿ, ಹೊಸ ತಲೆಮಾರಿನವರು ಸ್ವಾಮಿಯವರ ಕೊಡುಗೆಯ ಬಗ್ಗೆ ಹೊಸ ಒಳನೋಟಗಳ ಸಂವಾದ ಮಾಡಲಿ. ಮುಖ್ಯವಾಗಿ ಇಂತಹ ಲೇಖಕರ ಕನ್ನಡದ ಅರಿವನ್ನು ಯಾವೆಲ್ಲ ಬಗೆಯಲ್ಲಿ ಹೆಚ್ಚಿಸುವ ಮೂಲಕ ಘನತೆಯನ್ನು ತಂದಿದ್ದಾರೆಂಬುದನ್ನು ನಾವೆಲ್ಲ ನೆನಪಿಸಿಕೊಳ್ಳೋಣ. ಸ್ವಾಮಿಯವರಿಗೆ ಶತಮಾನದ ನಮನ. ಅ

# ಸಂಘದಲ್ಲಿ ತುಳು-ಕೊಂಕಣಿ ಸಂಭ್ರಮ



ಒಂದು ಭಾಷೆ, ಸಾಹಿತ್ಯ ಕೇವಲ ಒಂದು ಪ್ರದೇಶಕ್ಕೆ ಸೀಮಿತವಲ್ಲ. ಇವು ಹರಿವ ನೀರಿನಂತೆ ಚಲನಶೀಲವಾದುದು. ಈ ನೆಲೆಯಲ್ಲಿ ತುಳು-ಕೊಂಕಣಿ ಭಾಷೆಗಳು ಕೂಡ ಸಾಗಿವೆ. ಹೊರನಾಡಿನಲ್ಲಿದ್ದುಕೊಂಡು ನಾವು ನಮ್ಮ ಮಾತೃಭಾಷೆಯ ಸೇವೆ ಮಾಡುವುದು ನಮ್ಮ ಕರ್ತವ್ಯ. ಯುವ ಬರಹಗಾರರನ್ನು ಪ್ರೋತ್ಸಾಹಿಸುವ, ವೈವಿಧ್ಯಮಯ ಸಂಸ್ಕೃತಿಯನ್ನು ಬಿಂಬಿಸುವ 'ತುಳು-ಕೊಂಕಣಿ ಸಂಭ್ರಮ'ದಂತಹ ಕಾರ್ಯಕ್ರಮಗಳನ್ನು ಸಂಘಟಿಸುವ ಪ್ರಯತ್ನವನ್ನು ದೆಹಲಿ ಕರ್ನಾಟಕ ಸಂಘ ನಿರಂತರವಾಗಿ ಮಾಡುತ್ತಾ ಬರುತ್ತಿದೆ" ಎಂದು ಸಂಘದಲ್ಲಿ ನಡೆದ 'ತುಳು-ಕೊಂಕಣಿ ಸಂಭ್ರಮ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ನುಡಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತ ಸರಕಾರದ ಕೃಷಿ ಸಚಿವಾಲಯದ ಉಪ ನಿರ್ದೇಶಕರಾದ ಶ್ರೀ ಪ್ರಸನ್ನ ಸಾಲಿಯಾನ್ ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಶ್ರೀ ಅರವಿಂದ ಬಿಜೈ ಅವರ 'ತುಳು ಸಿನಿಮಾ-ಒಂದು ಅಧ್ಯಯನ' ಕೃತಿಯನ್ನು ಬಿಡುಗಡೆಗೊಳಿಸಿ "ಪ್ರಸ್ತುತ ಕಾಲಘಟ್ಟದಲ್ಲಿ ತುಳು ಸಿನಿಮಾ ಯಶಸ್ಸಿನತ್ತ ಸಾಗುತ್ತಿದೆ. ಕಲೆ ಹಾಗೂ ಮಾಧ್ಯಮವಾದ ಸಿನಿಮಾದ ಕುರಿತಾದ ಅಧ್ಯಯನ ಅಗತ್ಯವಾಗಿದೆ. ಇಂತಹ ಕಾರ್ಯವನ್ನು ದೆಹಲಿ ಕನ್ನಡ ಶಾಲೆಯ ಕನ್ನಡ ಶಿಕ್ಷಕರಾದ ಶ್ರೀ ಅರವಿಂದ ಬಿಜೈ ಅವರು ಮಾಡಿದ್ದಾರೆ. ಯುವಜನತೆಯಿಂದ ನಮ್ಮ ಕಲೆ, ಸಂಸ್ಕೃತಿ, ಪರಂಪರೆಯ ಕುರಿತಾಗಿ ಇನ್ನಷ್ಟು ಅಧ್ಯಯನಾತ್ಮಕ ಬರಹಗಳು ಪ್ರಕಟವಾಗಲಿ" ಎಂದು ಶುಭ ಹಾರೈಸಿದರು.





ಕರ್ನಾಟಕ ವಿಶ್ವವಿದ್ಯಾಲಯದ ಕಾಲೇಜೇಟ್ ಎಜ್ಯುಕೇಶನ್, ದಾಂಡೇಲಿ ಇದರ ನಿವೃತ್ತ ಪ್ರಾಂಶುಪಾಲರಾದ ಶ್ರೀ ಎ.ಕೆ. ಶಣೈ, ಮಂಗಳೂರಿನ ಸನಾತನ ನಾಟ್ಯಾಲಯದ ನೃತ್ಯ ನಿರ್ದೇಶಕಿಯಾದ ಶ್ರೀಮತಿ ಶಾರದಾ ಮಣಿಶೇಖರ್ ಅತಿಥಿಯಾಗಿ ಭಾಗವಹಿಸಿದ್ದರು. ಕೃತಿಕಾರರಾದ ಶ್ರೀ ಅರವಿಂದ ಬಿಜೈ ಅವರು ಉಪಸ್ಥಿತರಿದ್ದರು.





ಸಭಾ ಕಾರ್ಯಕ್ರಮದ ಬಳಿಕ ಶ್ರೀ ಮಿಥುನ್ ಶೆಟ್ಟಿ ನೇತೃತ್ವದಲ್ಲಿ 'ಗ್ಲಾಡಿಯೇಟರ್ಸ್' ಕಾಪು ತಂಡದಿಂದ ಶ್ರೀ ಅವಿನಾಶ್ ಅವರ ನಿರ್ದೇಶನದಲ್ಲಿ 'ತುಳು-ಕೊಂಕಣಿ ಸಂಸ್ಕೃತಿ' ಬಿಂಬಿತವಾದ ವೈವಿಧ್ಯಮಯ ನೃತ್ಯ ಕಾರ್ಯಕ್ರಮ ನೆರೆದವರ ಮನಸೆಳೆಯಿತು. ತುಳು ರಸಪ್ರಶ್ನೆ ಹಾಗೂ ಇನ್ನಿತರ ಆಕರ್ಷಕ ಸ್ಪರ್ಧೆಗಳು ಸಭಿಕರನ್ನು ರಂಜಿಸಿದವು. ಕೆನರಾ ಕಲ್ಚರಲ್ ಸೊಸೈಟಿಯ ಸದಸ್ಯರು ಕೊಂಕಣಿ ಹಾಡುಗಳನ್ನು ಜೊತೆಗೆ ಸ್ಥಳೀಯ ಕಲಾವಿದರಾದ ಶ್ರೀಮತಿ ಪೂಜಾ ಪಿ. ರಾವ್, ಶ್ರೀ ಅರವಿಂದ ಬಿಜೈ ಹಾಗೂ ಶ್ರೀ ಶ್ರೇಯಸ್ ಅವರು ತುಳು ಚಿತ್ರಗೀತೆಗಳನ್ನು ಪ್ರಸ್ತುತಪಡಿಸಿದರು.





ಸಂಘದ ಪ್ರಧಾನ ಕಾರ್ಯದರ್ಶಿ ಶೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಸಖಾರಾಮ ಉಪ್ಪೂರು ಹಾಗೂ ಶ್ರೀಮತಿ ಪೂಜಾ ಪಿ. ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಮೊದಲಿಗೆ ವಾರ್ತಾ ಮತ್ತು ಸಾರ್ವ ಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ 'ರಿಕ್ಷಾ ಡ್ರೈವರ್' ತುಳು ಚಲನಚಿತ್ರ ಪ್ರದರ್ಶನ ಗೊಂಡಿತು ಅ



**ಅಭಿಮತ ವರದಿ**



# ಸಂಘದಲ್ಲಿ ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ



ದೆಹಲಿ ಕರ್ನಾಟಕ ಸಂಘವು ರಾಜಧಾನಿ ದೆಹಲಿಯಲ್ಲಿ ಸಂಘದ ಸದಸ್ಯರಿಂದ ಪ್ರಪ್ರಥಮ ಬಾರಿಗೆ ಒಂದು ದಿನದ ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ ಕಾರ್ಯಕ್ರಮವನ್ನು ಕನ್ನಡದಲ್ಲೇ ಆಯೋಜಿಸಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಬೆಂಗಳೂರು ಮತ್ತು ಕರ್ನಾಟಕದ ಇತರೆಡೆ ಶಾಸ್ತ್ರೀಯ ನೃತ್ಯಗಳಿಗೆ ಕನ್ನಡಿಗ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಶಾಸ್ತ್ರೀಯ ನೃತ್ಯಗಳನ್ನು ಕಲಿಸಿಕೊಡುವ ಕನ್ನಡದ ಬಹುತೇಕ ನೃತ್ಯ ಗುರುಗಳು ತಮಿಳು ಹಾಡುಗಳಿಗೆ ನೃತ್ಯ ಕಲಿಸಿಕೊಟ್ಟು ಬೆಂಗಳೂರು ಮತ್ತಿತರ ಕರ್ನಾಟಕದ ನಗರ ಪ್ರದೇಶಗಳು ತಮಿಳುಮಯವಾಗುವುದಕ್ಕೆ ಕಾರಣವಾಗುತ್ತಿದ್ದಾರೆ ಎಂದರು. ಕನ್ನಡದ ಹಾಗೇ ತಮಿಳು ಕೂಡಾ ಒಂದು ಶ್ರೀಮಂತ ಭಾಷೆ. ಅದನ್ನು ನಾವು ಗೌರವಿಸಬೇಕು, ಆದರೆ ಮೊದಲ ಆದ್ಯತೆ ಕನ್ನಡದ ಕಡೆಗಿರಬೇಕು ಎಂದರು. ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಪ್ರವಾಸೋದ್ಯಮ ಇಲಾಖೆಗಳು ಶಾಸ್ತ್ರೀಯ ನೃತ್ಯ ಕಾರ್ಯಕ್ರಮಗಳನ್ನು ಪ್ರಾಯೋಜಿಸುವಾಗ ನೃತ್ಯಾರ್ಥಿ ಮತ್ತು ಸಹ ಕಲಾವಿದರು ಕನ್ನಡಿಗರೇ ಆಗಿರಬೇಕೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ಮಾಡಬೇಕೆಂದು ಕರೆಯಿತ್ತರು. ಕನ್ನಡದಲ್ಲೇ ಶಾಸ್ತ್ರೀಯ ನೃತ್ಯವನ್ನು ಮಾಡಿದರೆ ಕರ್ನಾಟಕದಲ್ಲಿ ಕನ್ನಡದ ಪ್ರೇಕ್ಷಕರ ಸಂಖ್ಯೆ ಬೆಳೆಯುವುದಕ್ಕೆ ಸಹಕಾರಿಯಾದೀತು ಎಂದರು. ನಾವು ಕೇವಲ ಕನ್ನಡದ ಹಾಡುಗಳಿಗೆ ಕಲಿಸಿಕೊಡುವ ನೃತ್ಯ ಗುರುಗಳನ್ನು ಆಯ್ಕೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಕನ್ನಡವನ್ನು ಉಳಿಸಿಕೊಂಡು ಹೋಗುವಲ್ಲಿ ಕಷ್ಟವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರಿನ ಭರತ ನಾಟ್ಯ ಕಲಾವಿದೆ ಹಾಗೂ ನಾಟ್ಯ ಗುರು ಶ್ರೀಮತಿ ಮಮತಾ ಕಾರಂತ ಅವರು ಶಾಸ್ತ್ರೀಯ ನೃತ್ಯಗಳಲ್ಲಿ ಕನ್ನಡಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎನ್ನುವುದಕ್ಕೆ ಧ್ವನಿ ಗೂಡಿಸಿದರು.

ಭರತನಾಟ್ಯ, ಕಥಕ್, ಒಡಿಸ್ಸಿ ಕೂಚುಪುಡಿ ಪ್ರಕಾರದ ನೃತ್ಯಗಳನ್ನು ದೆಹಲಿ ಕಲಾವಿದರುಗಳಾದ ಕುಮಾರಿ ಸಪ್ನಾ ಅತ್ತಾವರ, ಕುಮಾರಿ ರಚನಾ ಜೆ., ಕುಮಾರಿ ರಮ್ಯ, ಕುಮಾರಿ ನವನೀಶ ರಾಜೇಶ್, ಕುಮಾರಿ ಮೇಘಾ ಕಿಣಿ, ಕುಮಾರಿ ಸರಯು ಗಿರೀಶ್, ಕುಮಾರಿ ಕೆ.ಎನ್. ಭಾಗ್ಯಶ್ರೀ ಮತ್ತು ಕುಮಾರಿ ಕೆ.ಎನ್. ಜಯಶ್ರೀ, ಕುಮಾರಿ ಶ್ರುತಿ ಪ್ರಭಾಕರ್, ಕುಮಾರಿ ಪ್ರೇರಣಾ ರಾವ್, ಕುಮಾರಿ ನಿಖಿತಾ ಹೆಗಡೆ, ಕುಮಾರಿ ಇಷಿಕಾ ಸುದೇಶ್, ಕುಮಾರಿ ವೈಭವಿ ಶೆಣೈ, ಕುಮಾರಿ ಪವಿತ್ರಾ ಕಿರಣ್, ಕುಮಾರಿ ಆರ್ಷಾ ಗೋಪಿನಾಥ್ ಅವರುಗಳು ಪ್ರೇಕ್ಷಕರ ಮನಸೆಳೆದರು. ಈ ರೀತಿಯ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಮೊದಲ ಬಾರಿಗೆ ಆಯೋಜಿಸಲಾಗಿತ್ತು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಮಮತಾ ಕಾರಂತ ಅವರು ಪ್ರದರ್ಶಿಸಿದ ಭರತ ನಾಟ್ಯ ಎಲ್ಲರ ಮೆಚ್ಚುಗೆ ಗಳಿಸಿತು.

ಕಲಾವಿದೆ ಶ್ರೀಮತಿ ಮಮತಾ ಕಾರಂತ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು ಮತ್ತು ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ

***ಅಭಿಮತ ವರದಿ***

# ನೃತ್ಯದೊಂದಿಗೆ ಸಾಹಿತ್ಯವನ್ನೂ ಆಸ್ವಾದಿಲು ಸಾಧ್ಯವಾದ ಕಾರ್ಯಕ್ರಮ

ಮನಃಶಾಸ್ತ್ರಜ್ಞ ಮತ್ತು ಸರ್ಕಾರಿ ನೀತಿಗಳ ವಿಶ್ಲೇಷಕರಾದ **'ಅಕ್ಷರ ದಾಮ್ಲೆ'**ಯವರು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮದಲ್ಲಿ ಪ್ರಸ್ತುತ ಪಡಿಸಿದ ಕಲಾಪ್ರತಿಭೆಗಳ ಕುರಿತು ಅಭಿಮತಕ್ಕಾಗಿ ಒಂದು ಅವಲೋಕನ ಮಾಡಿದ್ದಾರೆ.

"ಶಾಸ್ತ್ರೀಯ ನೃತ್ಯದ ಕುರಿತು ಆಸ್ಥೆ ಇತ್ತೀಚೆಗೆ ಕಡಿಮೆ ಆಗುತ್ತಿದೆ. ಅದನ್ನು ಕೆಳಸ್ತರದಿಂದಲೇ ಗಟ್ಟಿಗೊಳಿಸುವ ಅಗತ್ಯವಿದೆ. ಇತರೆ ಝಗಮಗಿಸುವ ಕಲಾಪ್ರಕಾರಗಳಿಂದ ಶಾಸ್ತ್ರೀಯ ಕಲೆಯು ಬದಿಗೊತ್ತಲ್ಪಟ್ಟಿದೆ" ಎಂದು ಖ್ಯಾತ ಮೋಹಿನಿಯಾಟ್ಟಂ ವಿದುಷಿ ಕನಕ ರೆಲೆ ಅವರು ಹೇಳಿದ್ದಾರೆ. ಇವತ್ತಿನ ಕಾಲದಲ್ಲಿ ಸಿನೆಮಾ ನೃತ್ಯ ಹಾಗೂ ಸಂಗೀತಗಳನ್ನು ಅಭ್ಯಸಿಸಿ ಟಿವಿ ಮಾಧ್ಯಮಗಳಲ್ಲಿ ಕಾಣಿಸಿಕೊಂಡು ಬಹಳ ಕಡಿಮೆ ಸಮಯದಲ್ಲಿ 'ಸ್ಟಾರ್' ಆಗುವ ಬಯಕೆಯಿರುವ ಮಂದಿಗಳೇ ಹೆಚ್ಚು. ಶಾಸ್ತ್ರೀಯ ಕಲೆಗಳನ್ನು ಅಭ್ಯಸಿಸುವುದಕ್ಕೆ ಪರಿಶ್ರಮ ಬೇಕು, ನಿರಂತರ ಅಭ್ಯಾಸ ಬೇಕು ಮತ್ತು 'ಸ್ಟಾರ್' ಆಗುವುದಕ್ಕೆ ವರ್ಷಗಳ ಸಾಧನೆ ಬೇಕು. ಈ ವೇಗದ ಯುಗದಲ್ಲಿ ಅನೇಕ ಮಂದಿ ಅಂತಹ ತಾಳ್ಮೆಯನ್ನು ಕಳೆದುಕೊಂಡಿದ್ದಾರೆ. ಅಂತಹದರಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ ಕಾರ್ಯಕ್ರಮ ಮನವನ್ನು ಮುದಗೊಳಿಸಿತು.

ಭರತನಾಟ್ಯಂ, ಕಥಕ್ ಮತ್ತು ಒಡಿಸ್ಸಿ ನೃತ್ಯಗಳನ್ನು 16 ಮಂದಿ ಯುವ ದೆಹಲಿ ಕನ್ನಡಿಗರು ಪ್ರಸ್ತುತ ಪಡಿಸಿದರು. ಒಂದರ ನಂತರ ಒಂದರಂತೆ ಕಾರ್ಯಕ್ರಮದಲ್ಲಿ ವೈವಿಧ್ಯಗಳಿದ್ದುವು. ಶಾಸ್ತ್ರೀಯ ನೃತ್ಯದ ಬಹುಮುಖ್ಯ ಅಂಗಗಳಾದ ಭಾವ, ತಾಳ, ಲಯ, ಲಾಲಿತ್ಯ ಮುಂತಾದುವುಗಳು ಎಲ್ಲಾ ಕಲಾವಿದರಲ್ಲೂ ಕಂಡು ಬಂದುವು. ಶಾಸ್ತ್ರೀಯ ನೃತ್ಯದ ಚೌಕಟ್ಟನ್ನು ಮೀರಿ ಯಾರೂ ಹೋಗಲಿಲ್ಲ. ಭರತನಾಟ್ಯದ ಕಲಾವಿದರುಗಳಲ್ಲಿ ಸ್ಫುಟ ಹೆಜ್ಜೆಗಾರಿಕೆ ಮತ್ತು ಭಕ್ತಿ ರಸಗಳು ಮೇಳೈಸಿದರೆ, ಕಥಕ್ ನೃತ್ಯ ಕಲಾವಿದೆ ಲಾಲಿತ್ಯ ಪೂರ್ಣವಾಗಿ ಶೃಂಗಾರರಸ ಪ್ರಧಾನವಾದ ಪ್ರಸ್ತುತಿಯನ್ನು ಉಣಬಡಿಸಿದರು. ಗೀತಗೋವಿಂದವನ್ನಾಧರಿಸಿ ಬೆಳೆದಿರುವ ಒಡಿಸ್ಸಾದ ನೃತ್ಯ ಕಲೆಯಾದ ಒಡಿಸ್ಸಿ ನೃತ್ಯದ ಪ್ರಸ್ತುತಿಯೂ ಚೆನ್ನಾಗಿತ್ತು.

ಕಲೆಯಲ್ಲಿ ಸ್ಪರ್ಧೆ ಇರಬಾರದು ಎಂಬ ಅಭಿಪ್ರಾಯವನ್ನೇ ನಾನು ತಾಳಿರುವವನಾದರೂ, ಕಲಾಪ್ರತಿಭೆಯ ನೆಲೆಯಲ್ಲಿ ಕಲಾವಿದರು ಒಬ್ಬರಿಗೊಬ್ಬರು ಸವಾಲನ್ನೆಸೆಯುವುದರಿಂದ ಅವರಲ್ಲಿನ ಕಲಾನೈಪುಣ್ಯಕ್ಕೆ ಹೊಸ ರೂಪುಗಳು ಸಿಗುವುದನ್ನು ಅಲ್ಲಗಳೆಯುವುದಿಲ್ಲ. ಅದೇ ರೀತಿಯಲ್ಲಿ, ಕಿರಿಯ ಕಲಾವಿದೆಯರ ಪ್ರಸ್ತುತಿಗಳ ಕೊನೆಯಲ್ಲಿ ಕದನಕುತೂಹಲ ರಾಗದ ತಿಲ್ಲಾನದೊಂದಿಗೆ ಕೊನೆಗೊಳಿಸಿದ್ದು, ಬೆಂಗಳೂರಿನಿಂದ ಬಂದಿದ್ದ ಹಿರಿಯ ಕಲಾವಿದೆ ವಿದುಷಿ ಮಮತಾ ಕಾರಂತ್ ಅವರಿಗೆ ಸವಾಲನ್ನೆಸೆದಂತಿತ್ತು.

ಆ ಸವಾಲನ್ನು ಅಷ್ಟೇ ಉತ್ಸಾಹದಲ್ಲಿ ಸ್ವೀಕರಿಸಿದಂತೆ ಕಂಡ ಮಮತಾ ಕಾರಂತ್ ಅವರು ಜಗತ್ತಿಗೆ ಬೆಳಕನ್ನು ಕೊಡುವ ಸೂರ್ಯನನ್ನು ಆರಾಧಿಸುವಂತಹ ಸೂರ್ಯಾಷ್ಟಕಕ್ಕೆ ಸಂಬಂಧಿಸಿದ ಕೃತಿಯ ಮೂಲಕ ತಮ್ಮ ಕಾರ್ಯಕ್ರಮವನ್ನು ಆರಂಭಿಸಿದರು. ಆ ನಂತರ ಪ್ರಸ್ತುತ ಪಡಿಸಿದ ಮುತ್ತಯ್ಯ ಭಾಗವತರ ಕಾಮಾಸ್ ರಾಗದ 'ಮಾತೆ ಮಲಯಧ್ವಜ ಪಾಂಡ್ಯ ಸಂಜಾತೆ' ಎಂಬ ಸೊಗಸಾದ ದರುವರ್ಣವು ರಸಿಕರಿಗೆ ಕಲಾವಿದರ ಕಲಾಪ್ರೌಢಿಮೆಯ ರಸದೌತಣವನ್ನು ನೀಡಿತು. ಜತಿಗಳಿಗೆ ಸುಲಲಿತವಾಗಿ ಹೆಜ್ಜೆಗಳನ್ನು ಹಾಕುತ್ತಿದ್ದ ಕಲಾವಿದೆಯನ್ನು ನೋಡಿ ಅನೇಕರು ಹುಬ್ಬೇರಿಸಿದ್ದರು. ಅದಾದ ನಂತರದ ಪೂಜಿ ಬಂದಿದೆ ರಂಗ ಎಂಬ ಪುರಂದರದಾಸರ ಕೃತಿ ಅಪ್ಯಾಯಮಾನವಾಗಿತ್ತು. ಯಶೋದೆ ಕೃಷ್ಣನನ್ನು ಮಲಗಿಸುವುದಕ್ಕೆ ಮಾಡುವ ಪ್ರಯತ್ನ, ತನಗಿರುವ ಇತರ ಕೆಲಸಗಳನ್ನೂ ಜೊತೆ ಜೊತೆಗೇ ನಿಭಾಯಿಸುವ ರೀತಿ, ಮುಗ್ಧ ಮಗುವಿನ ಮೇಲೆ ಕೋಪವನ್ನೂ ತೋರಿಸಲಾಗದೆ, ಹಾಗಂತ ಆಟವಾಡಿಸಲು ಸಮಯವಿಲ್ಲದೆ ಒಂದು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಆಕೆಯ ಪೇಚಾಟ, ಯಶೋಧೆಯ ಮುಖದಲ್ಲಿ ಪ್ರತಿಬಿಂಬವಾಗುವ ಕೃಷ್ಣನ ತುಂಟಾಟ ಇವೆಲ್ಲವೂ ಕಣ್ಣಿಗೆ ಕಟ್ಟಿದಂತಿತ್ತು. ಅಲ್ಲೆಲ್ಲೋ ನಿಜವಾಗಿಯೂ ಕೃಷ್ಣನೇ ಬಂದಿದ್ದಾನೋ ಎಂಬ ಭಾವವನ್ನು ಸಭಿಕರಲ್ಲಿ ಮೂಡಿಸಿತು. ಕೊನೆಗೆ ಕಲಾವಿದೆ ರಂಗದಿಂದ ನಿರ್ಗಮಿಸುತ್ತಿದ್ದಂತೆ ಜನರು ಸಂತೋಷದಿಂದ ಚಪ್ಪಾಳೆ ತಟ್ಟಲು ಆರಂಭಿಸಿದಾಗ, ಮತ್ತೆ ರಂಗಕ್ಕೆ ಓಡಿ ಬಂದು "ಅಯ್ಯೋ, ಇಷ್ಟು ಕಷ್ಟ ಪಟ್ಟು ಈಗಷ್ಟೇ ಮಲಗಿಸಿದ್ದೇನೆ, ನೀವುಗಳು ಹೀಗೆ ಗಲಾಟೆ ಮಾಡಿದರೆ, ಅವನು ಏಳುವುದಿಲ್ಲವೋ" ಎಂಬಂತೆ ಮಾಡಿ ಮತ್ತೆ ಕೃಷ್ಣನನ್ನು ಮಲಗಿಸಿದ ಅಭಿನಯ ಪ್ರೇಕ್ಷಕರ ಮನಗೆದ್ದಿತು. ಅದಾದ ನಂತರ "ಭೋ ಶಂಭೋ" ಪ್ರಸ್ತುತಿ ಮಂಗಳಕ್ಕೆ ಬಹಳ ಸೂಕ್ತವಾಗಿತ್ತು.

ಶಾಸ್ತ್ರೀಯ ನೃತ್ಯ ಕಾರ್ಯಕ್ರಮವನ್ನು ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ದೆಹಲಿಯಷ್ಟೇ ಅಲ್ಲದೆ, ಗುರುಗ್ರಾಮ, ನೋಯ್ಡಾ ಹಾಗೂ ಇತರ ಅಕ್ಕಪಕ್ಕದ ಪ್ರದೇಶದಿಂದ ಬಂದು ವೀಕ್ಷಿಸಿ ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರ ಮುಖದಲ್ಲೂ ಒಂದು ಹೊಸ ಉಲ್ಲಾಸ ಎದ್ದು ಕಾಣುತ್ತಿತ್ತು. ಸಾಧಾರಣವಾಗಿ ಸಾಮಾನ್ಯ ಜನರಿಗೆ ಶಾಸ್ತ್ರೀಯ ಕಲೆಗಳು ಅರ್ಥವಾಗುವುದಿಲ್ಲ ಎಂಬ ಅಪವಾದಗಳಿವೆ. ಹಾಗಿದ್ದೂ ಈ ಕಾರ್ಯಕ್ರಮ ಯಶಸ್ವಿಯಾಗಿದೆ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ, ಕೃತಿಗಳ ಆಯ್ಕೆ. ಭರತನಾಟ್ಯ ಕಲಾವಿದರು ಕನ್ನಡದ ಹಾಡುಗಳನ್ನೇ ಆಯ್ಕೆ ಮಾಡಿದ್ದರು. ಹಾಗಾಗಿ ನೃತ್ಯದೊಂದಿಗೆ ಸಾಹಿತ್ಯವನ್ನೂ ಆಸ್ವಾದಿಸಲು ಸಾಧ್ಯವಾಗುತ್ತಿತ್ತು. ಅದೇ ಬಹುಷಃ ತೆಲುಗು ಅಥವಾ ತಮಿಳು ಭಾಷೆಯ ಕೃತಿಗಳನ್ನು ಆಯ್ಕೆ ಮಾಡಿದ್ದರೆ, ಇಷ್ಟೊಂದು ಮಟ್ಟಿಗೆ ಜನರ ಮನಮುಟ್ಟುತ್ತಿರಲಿಲ್ಲವೇನೋ! ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಬೆಳ್ಳಾರೆ ವಸಂತ ಶೆಟ್ಟಿ ಅವರ ಈ ಪ್ರಯೋಗ ಬಹಳ ಪ್ರಶಂಸನೀಯವಾದದ್ದು. ಶಾಸ್ತ್ರೀಯತೆಯನ್ನುಳಿಸಿಕೊಂಡೇ ನಮ್ಮದೇ ಭಾಷೆಯಲ್ಲಿ ಕಲಾಪ್ರದರ್ಶನಗಳು ನಡೆದಾಗ ಹೆಚ್ಚಿನ ಜನರಿಗೆ ತಲುಪುವುದು ಸಾಧ್ಯವಾಗುತ್ತದೆ ಎಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ. ಯಾವುದೇ ಕಾರ್ಯಕ್ರಮವಾದರೂ ಯಶಸ್ವಿಯಾಗಬೇಕಿದ್ದರೆ, ಅದಕ್ಕೊಂದು ಉತ್ತಮ ಸ್ವರೂಪ ಇರಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡಿದವರು ಶ್ರೀಮತಿ ಪೂಜಾ ರಾವ್ ಅವರು. ಕಾರ್ಯಕ್ರಮದುದ್ದಕ್ಕೂ ಎಲ್ಲೂ ಏಕತಾನತೆ ಬರದಂತೆ ಕಾಪಾಡಿಕೊಳ್ಳುವಲ್ಲಿ ಅವರ ಪಾತ್ರ ದೊಡ್ಡದು. ಅನೇಕ ಉತ್ತಮವಾದ ಸಾಧನೆಯನ್ನು ಮಾಡಿದ, ಅನೇಕ ಪ್ರಶಸ್ತಿಗಳನ್ನು ಬಾಚಿಕೊಂಡಿರುವ ಮತ್ತು ಉತ್ತಮ ಗುಣಮಟ್ಟದ ಕಾರ್ಯಕ್ರಮವನ್ನು ನೀಡಿದ ಎಲ್ಲಾ ಕಲಾವಿದರುಗಳಿಗೂ ಅಭಿನಂದನೆಗಳು. ಅ

### ಲೈಟ್ ಆಫ್ ಆಗ್ಲಿಲ್ವಲ್ಲಾ!

ವಿದುಷಿ ಮಮತಾ ಕಾರಂತರು ಪೂಜಿ ಬಂದಿದೆ ಎಂದು ಹೇಳ ಯಶೋದೆ ಕೃಷ್ಣನನ್ನು ಮಲಗಿಸುವ ಪುರಂದರದಾಸರ ಕೃತಿಯನ್ನು ಪ್ರಸ್ತುತ ಪಡಿಸುತ್ತಿದ್ದರು. ಕೃಷ್ಣನ ಕಥೆ ಎಂದ ತತ್‌ಕ್ಷಣ ನನ್ನ ಪಕ್ಕದಲ್ಲಿ ಕುಳಿತಿದ್ದ ಮಗುವೊಂದು ಕಣ್ಣರಳಿಸಿ ನೋಡತೊಡಗಿತು. ಅಲ್ಲಿಯವರೆಗೆ ಯಾವುದೇ ಪ್ರತಿಕ್ರಿಯೆ ಇಲ್ಲದೆ ನೃತ್ಯ ಪ್ರದರ್ಶನವನ್ನು ನೋಡುತ್ತಿದ್ದ ಆ ಮಗು, ಈಗ ಅಮ್ಮನಲ್ಲಿ ನೃತ್ಯದ ಕುರಿತು ವಿವರಗಳನ್ನು ಕೇಳತೊಡಗಿತು. ಮೊದಲಿಗೆ ನಾಲ್ಕು ಮುಖದ ಪೂಜಿ, ಆಮೇಲೆ ಮೂರು ಮುಖದ ಪೂಜಿ, ಮತ್ತೆ ಹನುಮಂತ ಹೀಗೆ ಒಬ್ಬೊಬ್ಬರೆ ಬಂದಿದ್ದಾರೆ ಎಂದೆಲ್ಲಾ ಆದಾಗ ಪ್ರತಿಸ್ಪಂದಿಸುತ್ತಿದ್ದ ಮಗು, ಆಮೇಲೆ ಕೃಷ್ಣ ಮಲಗಿದ ಅಂತ ಅಭಿನಯ ಬಂದಾಗ ತನ್ನ ಅಮ್ಮನತ್ರ ಕೇಳಿದಳು "ಕೃಷ್ಣ ಮಲಗಿದನಾ" ಅಂತ. ಅದಕ್ಕೆ "ಹೌದು, ಮಲಗಿದ" ಅಂತ ಅವಳಮ್ಮ ಅಂದದ್ದಕ್ಕೆ, "ಲೈಟ್ ಆಫ್ ಮಾಡ್ಲೇ ಇಲ್ಲ" ಅಂತ ಅವಳು ಪ್ರತಿಕ್ರಿಯಿಸಿದಳು. ಮಗುವಿನ ಮುಗ್ಧತೆ ಮತ್ತು ಗಮನಿಸುವಿಕೆಯನ್ನು ನೋಡಿ ಸಂತೋಷವಾಯ್ತು. ಮೆಲ್ಲ ಅವಳಲ್ಲಿ ನೀನೂ ಅಮ್ಮನಿಗೆ ಹೀಗೇ ಉಪದ್ರವ ಕೊಡ್ತೀಯಾ ಅಂತ ಕೇಳಿದೆ. ನಾಚಿ ನೀರಾಗಿ, ಅಮ್ಮನಿಗೊರಗಿಕೊಂಡಳು





ಕುಮಾರಿ ಪವಿತ್ರಾ ಕಿರಣ್ ಮತ್ತು
ಕುಮಾರಿ ಆರ್ಷಾ ಗೋಪಿನಾಥ್



ಕುಮಾರಿ
ನವನೀಶ ರಾಜೇಶ್





ಕುಮಾರಿ
ಶ್ರುತಿ ಪ್ರಭಾಕರ್



ಕುಮಾರಿ
ನಿಖಿತಾ ಹೆಗಡೆ

# ಭಾರತೀಯ
# ಸಂಗಮದಲ್ಲಿ ಕ





ಕುಮಾರಿ
ರಮ್ಯ



ಕುಮಾರಿ
ಇಷಿಕಾ ಸುದೇಶ್



ಕುಮಾರಿ
ಸಪ್ನಾ ಅತ್ತಾವರ್



ಕುಮಾರಿ
ರಯು ಗಿರೀಶ್




ಕುಮಾರಿ
ಕೆ.ಎನ್. ಭಾಗ್ಯಶ್ರೀ



ಕುಮಾರಿ
ಕೆ.ಎನ್. ಜಯಶ್ರೀ

# ಶಾಸ್ತ್ರೀಯ ನೃತ್ಯ
# ನ್ನಡದ ಪ್ರತಿಭೆಗಳು



ಕುಮಾರಿ
ಕನಿಕಾ ಭಟ್



ಕುಮಾರಿ
ಮೇಘಾ ಕಿಣಿ



ಕುಮಾರಿ
ಪ್ರೇರಣಾ ರಾವ್





ಕುಮಾರಿ
ವೈಭವಿ ಶೆಣೈ



ಕುಮಾರಿ
ರಚನಾ ಜೆ.



# ರಾಮಮೋಹನ ರಾವ್ ನೆನಪು ಕಾರ್ಯಕ್ರಮ

ಇತ್ತೀಚೆಗೆ ಅಗಲಿದ ಮಾಜೀ ವಾರ್ತಾಧಿಕಾರಿ ಐ ರಾಮಮೋಹನ ರಾವ್ ಅವರ ನೆನಪು ಮತ್ತು ನಮನ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘವು ಇದೇ ಜುಲೈ 30ರಂದು ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿತ್ತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರು ಮಾತಾಡುತ್ತಾ ರಾಜೀವ್ ಗಾಂಧಿಯವರು ಪ್ರಧಾನಿಯಾಗಿದ್ದಾಗ ತಾನು ಮತ್ತು ರಾಮಮೋಹನ್ ರಾವ್ ಅವರು ಜತೆಯಲ್ಲಿ ರಾಜೀವ್ ಗಾಂಧಿಯವರ ನಿಕಟದಲ್ಲಿ ಕೆಲಸಮಾಡಿದುದನ್ನು ಸ್ಮರಿಸಿಕೊಂಡರು. ಎಂತಹ ಕಠಿಣ ಸಂದರ್ಭವಿದ್ದರೂ ಅದನ್ನು ಅವರು ತಮ್ಮ ಹಸನ್ಮುಖದಿಂದ ನಿವಾರಿಸಿಕೊಳ್ಳುತ್ತಿದ್ದರು ಎಂದರು. ತನಗೆ ಅವರು ಓರ್ವ ಕುಟುಂಬದ ವ್ಯಕ್ತಿಯಂತೆ, ಓರ್ವ ಸ್ನೇಹಿತನಾಗಿ ಮತ್ತು ಸಹೋದ್ಯೋಗಿಯಾಗಿ ಸದಾ ನನ್ನೊಂದಿಗೆ ಇದ್ದರು ಎಂದು ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರು ತಮ್ಮ ಶೋಕವನ್ನು ವ್ಯಕ್ತ ಪಡಿಸಿದರು.

ದೆಹಲಿಯ ನಗರದೊಳಗಿರುವ ಕ್ರೌರ್ಯ ಮತ್ತು ಆಕ್ರಮಣಕಾರಿ ಪರಿಸರದಲ್ಲಿ ರಾಮಮೋಹನ ರಾಯರ ವ್ಯಕ್ತಿತ್ವವು ಬಹಳ ಆಪ್ತತೆಯಿಂದ ಕೂಡಿತ್ತು ಎಂದು ಸಂಘದ ಮಾಜೀ ಅಧ್ಯಕ್ಷ, ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ನುಡಿದರು. ರಾಮಮೋಹನರಾಯರು ತಮ್ಮ ಮಾತೃತ್ವದ ಸ್ಪರ್ಶದಿಂದ ಬಹಳಷ್ಟು ಆಪ್ತರಾಗಿದ್ದರು. ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾಲದಲ್ಲಿ ರಾಮಮೋಹನರಾಯರು ಕರ್ನಾಟಕ ಬ್ಯಾಂಕಿನ ನಿರ್ದೇಶಕರಾಗಿದ್ದು ಸಂಘದ ಬಹುತೇಕ ಆರ್ಥಿಕ ಸಮಸ್ಯೆಗಳಿಗೆ ಬ್ಯಾಂಕ್‌ನಿಂದ ಸಾಲ ಮತ್ತು ಸಂಘದಲ್ಲಿ ಬ್ಯಾಂಕ್ ಶಾಖೆಯನ್ನು ಹೆಚ್ಚಿನ ಬಾಡಿಗೆಗೆ ಮಾಡಿಸಿ ಬಹಳಷ್ಟು ಸಹಾಯ ಮಾಡಿದರು ಎಂದರು.

ಹಿರಿಯ ಪತ್ರಕರ್ತ ಶ್ರೀ ಸಚ್ಚಿದಾನಂದ ಮೂರ್ತಿಯವರು ಮಾತಾಡುತ್ತಾ ರಾಮಮೋಹನರಾಯರು ಮಾಧ್ಯಮ ಕ್ಷೇತ್ರದಲ್ಲಿ ಪ್ರತಿಯೊಬ್ಬರ ವಿಶ್ವಾಸವನ್ನು ಪಡೆದಿದ್ದರು ಎಂದರು. ಅವರು ದೇಶದ ಏಕತೆ ಮತ್ತು ವಿವಿಧತೆಬಗ್ಗೆ ನಂಬಿಕೆಯನ್ನಿಟ್ಟಿದ್ದರು ಮಾತ್ರವಲ್ಲ ತಮ್ಮ ವೃತ್ತಿಯಲ್ಲಿ ಮಾಧ್ಯಮದವರಿಗೆ ಈ ಕುರಿತು ಮನವರಿಕೆ ಮಾಡುತ್ತಿದ್ದರು ಎಂದರು. ಅವರು ದೇಶ ಮತ್ತು ತಮ್ಮ ವೃತ್ತಿಗೆ ನಿಷ್ಠರಾಗಿದ್ದರು ಎಂದರು.

ಹಿರಿಯ ನ್ಯಾಯವಾದಿ ಶ್ರೀ ಶರತ್ ಎಸ್ ಜವಳಿ ಅವರು ಮಾತನಾಡುತ್ತಾ ರಾಮಮೋಹನರಾಯರ ಕೊಡುಗೆಗಳನ್ನು ಸ್ಮರಿಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡಿ ರಾಮಮೋಹನ್ ರಾವ್ ಅವರು ಸಂಘಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಅಲ್ಲದೇ ಕಳೆದ ಸುಮಾರ್ಯ್ ಮೂರೂವರೆ ದಶಕಗಳಿಂದ ರಾವ್ ಅವರು ತನಗೆ ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸುತ್ತಿದ್ದರು ಎಂದು ನುಡಿದರು.

ಸಾಹಿತಿ ಮತ್ತು ರಾಮಮೋಹನ ರಾವ್ ಅವರ ಊರಿನವರಾದ ನಂದಳಿಕೆ ಬಾಲಚಂದ್ರ ರಾವ್ ಅವರು ಮಾತಾಡುತ್ತಾ ರಾಮಮೋಹನ ರಾವ್ ಅವರದ್ದು ಯಶಸ್ವೀ ತುಂಬು ಜೀವನವಾಗಿ ಎಲ್ಲರಿಗೂ ಮಾದರಿಯಾಗಿತ್ತು ಎಂದರು. ಅವರು ಇದ್ದಲ್ಲಿ ಒಂದು ಕಳೆ ಮತ್ತು ಗಾಂಭೀರ್ಯವಿತ್ತು; ಅದು ಅವರು ಕಾರ್ಯವೆಸಗಿದ ಎಲ್ಲಾ ಸಂಸ್ಥೆಗಳಲ್ಲಿ ಕುರುಹಾಗಿ ಕಾಣಬಹುದು ಎಂದರು. ಅವರಂತಹ ಮುಂದಾಳುತ್ವ ಬಹಳ ವಿರಳವಾದುದು ಎಂದು ರಾವ್ ಅವರು ಹೇಳಿದರು.

ರಾಮಮೋಹನ ರಾವ್ ಅವರ ಮೊಮ್ಮಗ ಮಾತನಾಡಿ ತನ್ನ ಅಜ್ಜ ತೀರಿಕೊಂಡ ಇಂತಹ ಕಷ್ಟದ ಕಾಲದಲ್ಲಿ ಎಲ್ಲರೂ ಜತೆಗಿದ್ದು ಸಾಂತ್ವನ ನೀಡಿದಕ್ಕೆ ಧನ್ಯವಾದ ತಿಳಿಸಿದರು. ಅವರು ವೃತ್ತಿಯಲ್ಲಿ ಎಷ್ಟೇ ತೊಡಗಿಸಿಕೊಂಡಿದ್ದರೂ ತಮ್ಮ ಮೊಮ್ಮಕ್ಕಳನ್ನು ಪಾರ್ಕ್‌ಗಳಲ್ಲಿ ಸುತ್ತಾಡಿಸಲು ಕೊಂಡೊಯ್ಯುತ್ತಿದ್ದರು ಎಂದು ನೆನಪಿಸಿದರು.

ಆರಂಭದಲ್ಲಿ ಕರ್ನಾಟಕ ಬ್ಯಾಂಕ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಮಹಾಬಲೇಶ್ವರ ಭಟ್ ಅವರ ಕಳುಹಿಸಿದ ಧ್ವನಿಮುದ್ರಿತ ಭಾಷಣವನ್ನು ಕೇಳಿಸಲಾಯಿತು. ಕರ್ನಾಟಕ ಸರಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತಯಾರಿಸಿದ ಐ. ರಾಮಮೋಹನ್ ರಾವ್ ಅವರ ಕುರಿತಾದ ಸಾಕ್ಷ್ಯಚಿತ್ರದ ಪ್ರದರ್ಶನವನ್ನು ನಡೆಸಲಾಯಿತು. ಪೃಥ್ವಿ ಕಾರಿಂಜೆ ಅವರು ಕಾರ್ಯಕ್ರಮ ನಿರ್ವಹಿಸಿದರು.

ಸಾಂಸ್ಕೃತಿಕ ನಮನ ಕಾರ್ಯಕ್ರಮದಲ್ಲಿ ಹಿನ್ನಲೆಗಾಯಕಿ ರಮ್ಯ ವಶಿಷ್ಠ ಅವರು ಕನ್ನಡ, ಪಂಜಾಬಿ, ಹಿಂದಿ ಮತ್ತು ಉರ್ದುನಲ್ಲಿ ಹಾಡುಗಳು, ಗಝಲ್ ಮತ್ತು ಸೂಫೀ ಹಾಡುಗಳನ್ನು ಹಾಡಿದರು. ಅ

***ಅಭಿಮತ ವರದಿ***





# ಕನ್ನಡಿಗರ ಹೆಮ್ಮೆ ಇನ್ನ ರಾಮಮೋಹನ ರಾವ್



**ಭಾರತದ ನಾಲ್ಕು ಪ್ರಧಾನ ಮಂತ್ರಿಗಳಿಗೆ ವಾರ್ತಾ ಸಲಹೆಗಾರರಾಗಿ ಮಾಧ್ಯಮ ಬೀಷ್ಮ ಇನ್ನ ರಾಮ ಮೋಹನ ರಾಯರು ಇತ್ತೀಚೆಗೆ ಅಗಲಿದ ದಿವ್ಯ ಚೇತನಕ್ಕೆ ಅವರ ಹುಟ್ಟೂರು ಇನ್ನ ಗ್ರಾಮದಲ್ಲಿ ಅಗಸ್ಟ್ 14ರಂದು ಜರಗುವ ನುಡಿನಮನ ಪ್ರಯುಕ್ತ ಅಕ್ಷರ ನಮನ.**

ಕರ್ನಾಟಕದಲ್ಲಿ ಹುಟ್ಟಿ ಬೆಳೆದು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡಿದ ಉನ್ನತ ಕನ್ನಡಿಗರಲ್ಲಿ ಇನ್ನ ರಾಮಮೋಹನ್ ರಾವ್ ಒಬ್ಬರು. ಕಾರಕಳದ ಸಮೀಪದ ಇನ್ನ (ಜನನ ಜನವರಿ 3, 1934) ಎಂಬ ಹಳ್ಳಿಯಲ್ಲಿ ಜನಿಸಿದ ಅವರು ಮುಂದೆ ಭಾರತದ ಪ್ರಧಾನಿಗಳಾಗಿದ್ದ ರಾಜೀವಗಾಂಧಿ, ವಿ.ಪಿ.ಸಿಂಗ್, ಚಂದ್ರಶೇಖರ್ ಹಾಗೂ ಪಿ.ವಿ.ನರಸಿಂಹ ರಾವ್ ಅವರಿಗೆ ಪ್ರಧಾನ ವಾರ್ತಾ ಸಹಲೆಗಾರರಾಗಿ ಹಾಗೂ ವಕ್ತಾರರಾಗಿ ಸುಮಾರು ಆರೂವರೆ ವರ್ಷಗಳ ಕಾಲ ಕೆಲಸ ಮಾಡಿದರು ಎಂಬ ವಿಷಯ ನಮ್ಮ ಹೆಮ್ಮೆಗೆ ಕಾರಣವಾಗಿದೆ.

ರಕ್ಷಣಾ ಸಚಿವಾಲಯದಲ್ಲಿ ಭಾರತೀಯ ಸೇನೆಯ ಸಂಪರ್ಕಾಧಿಕಾರಿಯಾಗಿ ಅವರು ಎರಡು ದಶಕಗಳ ಕಾಲ ದುಡಿದರು. ಸೇನೆಯಲ್ಲಿ ಬ್ರಿಗೇಡಿಯರ್ ಸ್ಥಾನ ಪಡೆದು, ಗಾಜಾಪಟ್ಟಿಯಲ್ಲಿ ವಿಶ್ವಸಂಸ್ಥೆಯ ತುರ್ತು ಪಡೆಯ ಉಪಸಂಪರ್ಕಾಧಿಕಾರಿಯಾಗಿ ಓಡಾಡಿದರು. ತುರ್ತು ಪಡೆಯ ಮುಖವಾಣಿ 'ದಿ ಸ್ಟ್ಯಾಂಡ್ ಡ್ಯೂನ್'ನ ಸಂಪಾದಕರಾದರು. ಇಷ್ಟೆಲ್ಲಾ ಆದಾಗಲೂ ಕನ್ನಡ–ತುಳುವಿನೊಡನೆ ನಿರಂತರ ಸಂಪರ್ಕ ಇರಿಸಿಕೊಂಡು ತಮ್ಮ ಕಾಲು ನೆಲದಲ್ಲಿಯೇ ಇರುವಂತೆ ನೋಡಿಕೊಂಡರು. ಕಾರಣ ಸಂಪರ್ಕ ಇರಿಸಿಕೊಂಡು ತಮ್ಮ ಕಾಲು ನೆಲದಲ್ಲಿಯೇ ಇರುವಂತೆ ನೋಡಿಕೊಂಡರು. ಕಾರಣ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಲು ಸಾಧ್ಯವಾಯಿತು. ತುಳುಕೂಟದ ಉಪಾಧ್ಯಕ್ಷರಾಅಗಿ ಆಸ್ಕರ್ ಫರ್ನಾಂಡಿಸ್ ಅವರ ಜತೆ ಸೇರಿ ತುಳುವಿಗಾಗಿ ಹೋರಾಡಲು ಸಾಧ್ಯವಾಯಿತು.

ಹಿತಮಿತವಾದ ಆದರೆ ನಿಖರ ಹಾಗೂ ನೇರ ಮಾತು. ಮುಖದಲ್ಲಿ ಮಗುವಿನಂತ ನಿಷ್ಕಲ್ಮಶವಾದ ನಗು ಸ್ನೇಹಶೀಲ ವ್ಯಕ್ತಿತ್ವಗಳಿಂದಾಗಿ ರಾಮಮೋಹನ್ ರಾವ್ ಹೆಹಲಿಯಲ್ಲಿ ಎಲ್ಲರಿಗೂ ಇಷ್ಟ. ಜಗತ್ತಿನ ಬೃಹತ್ ವಾರ್ತಾಸಂಸ್ಥೆಯಾಗಿರುವ ಏಷಿಯಾನ್ ನ್ಯೂಸ್ ಇಂಟರ್ ನ್ಯಾಷನಲ್‌ನಲ್ಲಿ ಎ.ಎಸ್.ಐ. ಅವರೀಗ ಉಪಾಧ್ಯಕ್ಷ ಹಾಗೂ ಪ್ರಧಾನ ವಾರ್ತಾ ಸಂಪಾದಕ ಇಷ್ಟು ದೊಡ್ಡ ಹುದ್ದೆಯಲ್ಲಿದ್ದರೂ ಅವರನ್ನು ಸುಲಭವಾಗಿ ಭೇಟಿ ಮಾಡಬಹುದು. ಅವರಿಂದ ಸಹಾಯ ಕೇಳಬಹುದು.

ಅರ್ಥಶಾಸ್ತ, ಸಮಾಜಶಾಸ್ತ ಮತ್ತು ರಾಜಕೀಯ ಶಾಸ್ತಗಳಲ್ಲಿ ಸ್ನಾತಕೊತ್ತರ ಪದವಿ ಪಡೆದಿರುವ ರಾವ್ ಅವರು ವಕೀಲರಾಗಬೇಕೆಂಬ ಕನಸು ಹೊತ್ತು ಕಾನೂನು ಶಾಸದಲ್ಲಿ ಸ್ನಾತಕ ಪದವಿ ಪಡೆದಿದ್ದರು. ಆದರೆ ಸೇರಿದ್ದು ಭಾರತೀಯ ಸಂಪರ್ಕ ಸೇವೆಯಲ್ಲಿ ವಾರ್ತಾಧಿಕಾರಿಯಾಗಿ ಮುಂದೆ ಆಕಾಶವಾಣಿ, ವಿದೇಶ ವ್ಯವಹಾರಗಳ ಸಚಿವಾಲಯ, ಕೇಂದ್ರ ಜಾಹಿರಾತು ವಿಭಾಗ, ಕುಟುಂಬ ಕಲ್ಯಾಣ ಸಚಿವಾಯಲಗಳಲ್ಲಿ ಅವರು ನಿಷ್ಠೆಯಿಂದ ದುಡಿದರು.

ಭಾರತದ ಕೆಲವು ಅತ್ಯಂತ ಸಂದಿಗ್ದ ಐತಿಹಾಸಿಕ ಕ್ಷಣಗಳಲ್ಲಿ ಅವರು ಕೆಲಸ ಮಾಡಬೇಕಾಗಿ ಬಂತು. 'ರಾಜೀವ್ ಗಾಂಧಿಯವರ ಹತ್ಯೆ ಆದಾಗ ಸುದ್ಧಿ ನಿಯಂತ್ರಣದ ಜವಬ್ದಾರಿ ನನ್ನ ಮೇಲಿತ್ತು. ನನ್ನ ಜೀವನದ ಅತ್ಯಂತ ಕ್ಲಿಷ್ಟಕರ ದಿನಗಳವು' ಎಂದು ನನ್ನೊಡನೆ ಒಮ್ಮೆ ಹೇಳಿದ್ದರು. 1983ರಲ್ಲಿ ದೆಹಲಿಯಲ್ಲಿ ನಡೆದ ಅಲಿಪ್ತ ರಾಷ್ಟಗಳ ಮತ್ತು ಕಾಮನ್ ಹೆಲ್ ರಾಷ್ಟ್ರಗಳ ಶೃಂಗಸಭೆಯ ವೇಳೆ ಮಾಧ್ಯಮ ನಿರ್ದೇಶಕರಾಗಿ ಕೆಲಸ ಮಾಡುವುದು ಸುಲಭವಾಗಿರಲಿಲ್ಲ ಎಂದೂ ಅವರು ಹೇಳುತ್ತಾರೆ.

1992ರಲ್ಲಿ ರಾಮಮೋಹನ್ ರಾವ್ ಅವರು ಭಾರತ ಸರ್ಕಾರದ ಸೇವೆಯಿಂದ ನಿವೃತ್ತರಾದರು. ನಿವೃತ್ತಿಯ ಅನಂತರವೂ ಅವರು ಹಲವಾರು ಜವಬ್ದಾರಿಗಳನ್ನೂ ನಿರ್ವಹಿಸಬೇಕಾಯಿತು. ಅದರಲ್ಲಿ ಬಹಳ ಪ್ರಮುಖವಾದದ್ದು ಜಮ್ಮು–ಕಾಶ್ಮೀರ ಸರ್ಕಾರಕ್ಕೆ ಸಲಹೆಗಾರರಾಗಿ ನೇಮಕಗೊಂಡದ್ದು. ಕಾಶ್ಮೀರ ಕುರಿತಾಗಿ ಪಾಕಿಸ್ತಾನವು ಮಾಡುತ್ತಿರುವ ಅಪ್ರಚಾರಗಳನ್ನು ಎದುರಿಸಿ, ಭಾರತ ಪರವಾದ ಪ್ರಚಾರಗಳನ್ನು ಜಗತ್ತಿನಾದ್ಯಂತ ಹರಡುವಲ್ಲಿ ರಾಮಮೋಹನ್ ರಾವ್ ಅವರು ಪ್ರಮುಖ ಪಾತ್ರ ವಹಿಸಿದರು. ಭಾರತ ಸರ್ಕಾರವು ವಿಶ್ವಸಂಸ್ಥೆಗೆ ಕಳುಸಿಕೊಟ್ಟ ಮಾಧ್ಯಮ ನಿಯೋಗದ ಸದಸ್ಯರಾಗಿ ಅವರು ಮಹತ್ವದ ಕಾರ್ಯ ನಿರ್ವಹಿಸಿದ್ದರು.

ವಿದೇಶದಲ್ಲಿ ರಾವ್ ಅವರು ಮಾಡಿದ ಬಹುದೊಡ್ಡ ಕೆಲಸಗಳಲ್ಲಿ ಟ್ರಿನಿಡಾನ್ ನಲ್ಲಿ ಸ್ಥಾಪಿಸಿದ ಮಹತ್ಮಾ ಗಾಂಧಿ ಸಾಂಸ್ಕೃತಿಕ ಸಹಯೋಗ ಕೇಂದ್ರವು ಒಂದು. 1996–1997ರ ಅವಧಿಯಲ್ಲಿ ರಾಮಮೋಹನ್ ರಾಯರ ನಿರ್ದೇಶಕತ್ವದಲ್ಲಿ ಸ್ಥಾಪಿಸಲಾದ ಈ ಕೇಂದ್ರವು ಒಂದು ಟ್ರಿನಿಡಾನ್‌ನ ಎಲ್ಲಾ ಅನಿವಾಸಿ ಭಾರತೀಯರ ಚಟುವಟಿಕೆಗಳಿಗೆ ಆಶ್ರಯ ನೀಡುವ ಕೇಂದ್ರವಾಗಿ ಬೃಹತ್ತಾಗಿ ಬೆಳೆದಿದೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ರಾಮಮೋಹನ ರಾಯರಿಗೆ ದೊಡ್ಡ ಹೆಸರಿದೆ. 1998–99ರ ಅವಧಿಯಲ್ಲಿ ಅವರು ನವದೆಹಲಿಯ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮುನಿಕೇಶನ್' ಸಂಸ್ಥೆಯಲ್ಲಿ ಸಂದರ್ಶಕ ಪಾಧ್ಯಾಪಕರಾಗಿಯೂ, 2001ರಲ್ಲಿ ಪ್ರಸಾರ ಭಾರತೀಯ ಸಲಹೆಗಾರಗಾಗಿಯೂ ನೇಮಕಗೊಂಡಿದ್ದರು. ಕಾರ್ಗಿಲ್ ಯುದ್ಧದ ಅನಂತರ ಭಾರದ ಸರಕಾರ ಸಿದ್ಧಪಡಿಸಿದ ವರದಿಗಾಗಿ (2002–2004) ರಾಮಮೋಹನ್ ರಾಯರು ವಿಶೇಷವಾಗಿ ದುಡಿದ್ದಿದ್ದರು.

ಹೀಗೆ ವೃತ್ತಿ, ಸಂಬಂಧಿಯಾದ ಹುದ್ದೆಗಳಲ್ಲಿ ಪ್ರಾಮಾಣಿಕವಾಗಿ ದುಡಿದ ರಾಮಮೋಹನ್ ರಾಯರು ಕನ್ನಡ ಮತ್ತು ತುಳುವಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ಅಪಾರವಾಗಿ ದುಡಿದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ, ಅನಂತರ ಅದರ ಅಧ್ಯಕ್ಷರಾಗಿ ದುಡಿದ ಅವರು ದೆಹಲಿಯಲ್ಲಿ ಕನ್ನಡದ ಧ್ವನಿ ನಿರಂತರವಾಗಿ ಕೇಳುವ ಹಾಗೆ ಮಾಡಿದ್ದರು. ಈಗ ರಾಜಧಾನಿಯಲ್ಲಿ ತಲೆ ಎತ್ತಿ ನಿಂತಿರುವ ಬೃಹತ್ ಸಾಂಸ್ಕೃತಿಕ ಸಮುಚ್ಚಯದ ಕಟ್ಟಡದ ಕೆಲಸಗಳಿಗೆ ಹಣದ ತೊಂದರೆಯಾಗದಂತೆ ನೋಡಿಕೊಂಡಿದ್ದರು. ದೆಹಲಿ ತುಳು ಕೂಟದ ಅಧ್ಯಕ್ಷರಾಗಿದ್ದಾಗ ಅವರು ಇನ್ನೊಬ್ಬ ತುಳುವ ಜಾರ್ಜ್ ಫರ್ನಾಂಡಿಸ್ ಅವರ ಸಹಾಯದಿಂದ ತುಳು ಭಾಷೆಯನ್ನು ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಲು ಹೋರಾಡಿದ್ದರು. ಅ

***ಡಾ. ಪುರುಷೋತ್ತಮ ಬಿಳಿಮಲೆ***













# ರಾಮಮೋಹನ ರಾವ್ ಅವರಿಗೆ ಸಾಂಸ್ಕೃತಿಕ ನಮನ

## ಕನ್ನಡೇತರರಿಗೆ ಕನ್ನಡ ಸಾಹಿತ್ಯ ಪರಿಚಯಿಸುವ ದೆಹಲಿ ಕರ್ನಾಟಕ ಸಂಘದ ಪ್ರಯತ್ನ




ದೆಹಲಿ ಕರ್ನಾಟಕ ಸಂಘವು ಇತ್ತೀಚಿನ ನಾಲ್ಕಾರು ವರ್ಷಗಲ್ಲಿ ಹೆಚ್ಚು ಕಡಿಮೆ ಪ್ರತಿವಾರದಂಚಿನೆ ರಜಾ ದಿನಗಲ್ಲಿ ಕನ್ನಡಿಗರಿಂದ ಕನ್ನಡಿಗರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಇದು ಶ್ಲಾಘನೀಯ. ಪ್ರೇಕ್ಷಕ ವರ್ಗವೂ ಕೂಡ ಬೆಳೆಯುತ್ತ ಬಂದಿರುವುದು ನನಗೆ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಹಿಂದೆ ಉತ್ತಮ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಿದರೆ ಬೆರಳೆಣಿಕೆಯ ಶ್ರೋತೃಗಳು ಇರುತ್ತಿದ್ದರು. ಆದರೆ ಈಗ ಹಾಗಿಲ್ಲ, ಕಳೆದ ದಿನಾಂಕ 30ರಂದು ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ "ಇನ್ನ ರಾಮಮೋಹನ ರಾವ್ ನೆನಪು ಮತ್ತು ಸಾಂಸ್ಕೃತಿಕ ನಮನ" ಇದಕ್ಕೊಂದು ಉತ್ತಮ ಉದಾಹರಣೆ. ಈ ಕಾರ್ಯಕ್ರಮವು ಒಂದು ರೀತಿಯಲ್ಲಿ ವಿಶಿಷ್ಟ ಕಾರ್ಯಕ್ರಮವಾಗಿತು. ಇದು ಶಾಸ್ತ್ರೀಯ ಸಂಗೀತದ ಮೂಲಕ ಕನ್ನಡದ ಕೆಲ ಕೃತಿಗಳನ್ನು ಕನ್ನಡೇತರರಿಗೆ ಪರಿಚೆಯಿಸುವ ಉತ್ತಮ ಪ್ರಯತ್ನವಾಗಿತ್ತು. ಹೆಸರಾಂತ ಗಾಯಕಿ ರಮ್ಯ ವಶಿಷ್ಟ ಅವರು ಕನ್ನಡ, ಹಿಂದಿ, ಉರ್ದು, ಪಂಜಾಬಿ ಭಾಷೆಗಳಲ್ಲಿ ಗಝಲ್ ಹಾಗೂ ಸೂಫಿ ಶೈಲಿಯಲ್ಲಿ ಉತ್ತಮ ಸಂಗೀತ ಕಾರ್ಯಕ್ರಮ ನೀಡಿದರು.

ಇಂದು ಕನ್ನಡದ ಸಂಸ್ಕೃತಿ, ಸಾಹಿತ್ಯ, ಸಂಗೀತ ಹಾಗೂ ವಿವಿಧ ಕಲಾ ಆಯಾಮಗಳನ್ನು ಕನ್ನಡೇತರರಿಗೆ ಪರಿಚಯಿಸುವ ಕಾರ್ಯವನ್ನು ದೆಹಲಿ ಕರ್ನಾಟಕ ಸಂಘ ದೆಹಲಿ ಹಾಗೂ ದೆಹಲಿಯ ಸತ್ತ ಮುತ್ತಲಿನ ಪ್ರದೇಶಗಳಲ್ಲಿ ಮುಖ್ಯವಾಗಿ ಮಾಡಬೇಕಾಗಿದೆ. ಇದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ಸಂಘವು ಆಯೋಜಿಸಿದ ಕರ್ನಾಟಕದಿಂದ ಬಂದ 15 ಕಲಾವಿದರು ಸಂಘದ ಆವರಣದಲ್ಲಿ ನಾಲ್ಕು ದಿನಗಳ ಕಾಲ "ಕರ್ನಾಟಕ ಬಯಲು ಚಿತ್ರಾಲಯ" ಕಾರ್ಯಕ್ರಮದಡಿ ಕಲಾಕೃತಿ ರಚನೆ ಮಾಡಿದ್ದು. ಈ ಕಲಾ ಕಾರ್ಯಾಗಾರದ ಮುಕ್ತಾಯ ಸಮಾರಂಭದಲ್ಲಿ ಕನ್ನಡ ಹಾಡುಗಳಿಗೆ ಹಿಂದಿ ಮಕ್ಕಳಿಂದ ಕಥಕ್ ನೃತ್ಯ ಕಾರ್ಯಕ್ರಮ ಆಯೋಜಿಸಿದ್ದು ಕೂಡ ಶ್ಲಾಘನೀಯ. ಹೀಗೆ ಕನ್ನಡವನ್ನು ಕನ್ನಡೇತರರಿಗೆ ಪರಿಚಯಿಸುವ ಇನ್ನೂ ಹೆಚ್ಚಿನ ಉತ್ತಮ ಕಾರ್ಯಕ್ರಮಗಳು ಮೂಡಿ ಬರಲಿ. ಅ

***ಚೆನ್ನು ಎಸ್. ಮಠದ***






# ದೆಹಲಿಯಲ್ಲಿ ನಾಡಪ್ರಭು ಕೆಂಪೇಗೌಡ, ದಾಸಶ್ರೇಷ್ಠ ಕನಕದಾಸರು ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ

ಕನ್ನಡ ನಾಡಿನಲ್ಲಿ ಜನ್ಮ ತಳೆದ ಮಹಾನ್ ದಾರ್ಶನಿಕರ ಜೀವನ ಸಾಧನೆಗಳನ್ನು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವ ಮೂಲಕ ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಜಗತ್ತಿಗೆ ಪರಿಚಯಿಸಬೇಕೆಂದು ನವದೆಹಲಿಯ ಕರ್‌ಕರ್‌ಡೂಮ್ ಕೋರ್ಟಿನ ಹಿರಿಯ ನ್ಯಾಯಾಧೀಶರಾದ ಶ್ರೀ ಎ.ಎಸ್. ಜಯಚಂದ್ರ ಅಭಿಪ್ರಾಯ ಪಟ್ಟರು. ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕಳೆದ ಜುಲೈ 29ರಂದು ಶ್ರೀ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ, ಬೆಂಗಳೂರು ಹಾಗೂ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಜೊತೆಗೂಡಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ, ದಾಸಶ್ರೇಷ್ಠ ಕನಕದಾಸರು ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಸಾಂಸ್ಕೃತಿಕ ಉತ್ಸವ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ರಾಷ್ಟ್ರೀಯ ಉತ್ಸವದಲ್ಲಿ ಭಾಗವಹಿಸಿದ್ದ ಸ್ಥಳೀಯ ಕನ್ನಡ ಪ್ರತಿಭೆಗಳು ಹಾಗೂ ಬೆಂಗಳೂರಿನಿಂದ ಆಗಮಿಸಿದ್ದ ಶ್ರೀ ಕೋಲಾರ ರಮೇಶ್ ಅವರ ನೇತೃತ್ವದ ಶ್ರೀ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ ಮತ್ತು ಶ್ರೀ ವೆಂಕಟಾದ್ರಿ ಅವರ ವೆಂಕಿ ಸ್ಕೂಲ್ ಆಫ್ ಡಾನ್ಸ್ ಸಂಸ್ಥೆಯ ಪ್ರತಿಭಾನ್ವಿತ ಕಲಾ ತಂಡಗಳು ಪ್ರದರ್ಶನವನ್ನು ಕಣ್ಮನ ಸೆಳೆಯುವಂತಹ ಅತ್ಯುತ್ತಮ ಪ್ರದರ್ಶನಗಳನ್ನು ನೀಡುವ ಮೂಲಕ ಕಾರ್ಯಕ್ರಮವನ್ನು ರಂಜನೀಯಗೊಳಿಸಿದರು. ಮುಖ್ಯವಾಗಿ ಕು. ಸಂಜೀವಿನಿ ಬೆಂಗಳೂರು–ಪ್ರಾರ್ಥನಾ ನೃತ್ಯ, ವೆಂಕಿ ಸ್ಕೂಲ್ ಆಫ್ ಡಾನ್ಸ್–ಜಾನಪದ ನೃತ್ಯ, ಭರತ್ ಮತ್ತು ತಂಡದಿಂದ–ಕಂಟೆಂಪರರಿ ನೃತ್ಯ, ವೈಷ್ಣವಿ ಮತ್ತು ತಂಡದಿಂದ–ಭರತನಾಟ್ಯ, ಭೂಮಿಕಾ ನೃತ್ಯ ಹಾಗೂ ಸಂಗೀತ ಶಾಲೆ–ಸಮೂಹ ನೃತ್ಯ, ಭಾಗ್ಯ ಮತ್ತು ತಂಡದಿಂದ–ಶಾಸ್ತ್ರೀಯ ನೃತ್ಯ, ನೃತ್ಯಾಂಜಲಿ ನಾಟ್ಯ ಕಲಾ ಅಕಾಡೆಮಿ–ಜಾನಪದ ನೃತ್ಯ, ಲಲಿತ್ ಎಂ.ಪಿ. ಭರಧ್ವಾಜ್, ಬೆಂಗಳೂರು–ಭರತನಾಟ್ಯ, ಮೊನೀಶ ಸಾಂಸ್ಕೃತಿಕ ಕಲಾ ಅಕಾಡೆಮಿ ಹೊಸಕೋಟೆ–ಸಮೂಹ ನೃತ್ಯ, ರೂಪ ಮತ್ತು ತಂಡ, ಕೋಲಾರ–ನೃತ್ಯರೂಪಕ, ಗಾನಗಂಧರ್ವ, ನವದೆಹಲಿ–ಸುಗಮ ಸಂಗೀತ, ಕು. ಸಪ್ನಾ ಅತ್ತಾವರ, ನವದೆಹಲಿ–ಶಾಸ್ತ್ರೀಯ ನೃತ್ಯ, ಕು. ಪ್ರೇರಣಾ ರಾವ್, ನವದೆಹಲಿ–ಕಥಕ್ ನೃತ್ಯ, ಕು. ರಚನಾ ಜೆ.–ಭರತನಾಟ್ಯ, ಕು. ಹಿತಶ್ರೀ ರಾಘವೇಂದ್ರ, ಗುರ್‌ಗಾಂವ್–ನೃತ್ಯರೂಪಕ, ಕು. ನವನೀತ ರಾಜೇಶ್, ಗುರ್‌ಗಾಂವ್–ಶಾಸ್ತ್ರೀಯ ನೃತ್ಯ, ಕು. ಅಕ್ಷತಾ ಎ. ಕಲ್ಲೋರು–ಭರತನಾಟ್ಯ–ಮೊದಲಾದ ಪ್ರತಿಭೆಗಳು ಸಾಂಸ್ಕೃತಿಕ ಉತ್ಸವವನ್ನು ತಮ್ಮ ಕಲಾ ಪ್ರದರ್ಶನದ ಮೂಲಕ ಯಶಸ್ವಿಗೊಲಿಸಿದವು. ಸಭಾಂಗಣದಲ್ಲಿ ತುಂಬಿದ ದೆಹಲಿಯ ಕನ್ನಡಿಗರು ಈ ವರ್ಣರಂಜಿತ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಆನಂದಿಸಿದರು.

ಈ ರಾಷ್ಟ್ರೀಯ ಉತ್ಸವಕ್ಕೆ ಕಾರಣರಾದ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ, ಕೆ.ಆರ್. ಪುರಂ, ಬೆಂಗಳೂರಿನ ಕಾರ್ಯದರ್ಶಿಗಳಾದ ವಿದ್ವಾನ್ ಕೋಲಾರ ರಮೇಶ್ ಇವರಿಗೆ ಸಮಾರಂಭದಲ್ಲಿದ್ದ ಎಲ್ಲಾ ಅತಿಥಿ ಗಣ್ಯರುಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟೀ ನಿರ್ದೇಶಕರು ಇವರನ್ನು ಅಭಿನಂದಿಸಿದರು. ಜೊತೆಗೆ ತಮ್ಮ ಕಲಾ ನೈಪುಣ್ಯತೆಯನ್ನು ಮೆರೆದ ಎಲ್ಲ ಕಲಾವಿದರಿಗೂ ಸ್ಮರಣಿಕೆ ಮತ್ತು ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು.

ಈ ಸಮಾರಂಭದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ನವೀನ್ ಲಕ್ಷ್ಮಣ್ ಐ.ಎ.ಎಸ್. ಅಧಿಕಾರಿಗಳು, ದೆಹಲಿ ಜಲಬೋರ್ಡ್‌ನ ಹಣಕಾಸು ವಿಭಾಗದ ನಿರ್ದೇಶಕರು, ಡಾ. ಎಸ್.ಎಂ. ಕಂಟೀಕರ್, ಸದಸ್ಯರು, ರಾಷ್ಟ್ರೀಯ ಗ್ರಾಹಕರ ಆಯೋಗ, ನವದೆಹಲಿ, ಶ್ರೀ ಬಲವಂತ ರಾವ್ ಪಾಟೀಲ್, ಜಂಟೀ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಬೆಂಗಳೂರು ಮೂಲದವರಾಗಿದ್ದು ವಾಷಿಂಗ್ಟನ್, ಡಿ.ಸಿ. ಅಮೇರಿಕದಲ್ಲಿ ನೆಲೆಸಿರುವ ಡಾ. ತ್ಯಾಗರಾಜ್, ಭಾರತ ಸರ್ಕಾರದಲ್ಲಿ ವಿಜ್ಞಾನಿಗಳಾಗಿರುವ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಬಿ.ಕೆ. ಬಸವರಾಜು, ಅಧ್ಯಕ್ಷರು, ಗಂಡುಗಲಿ ಮದಕರಿ ನಾಯಕ ಅಸೋಸಿಯೇಶನ್, ವೆಂಕಿ ಸ್ಕೂಲ್ ಆಫ್ ಡಾನ್ಸ್‌ನ ಅಧ್ಯಕ್ಷರಾದ ಶ್ರೀ ವೆಂಕಟಾದ್ರಿ ಹಾಗೂ ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಾಗರಾಜ ಅವರುಗಳು ಉಪಸ್ಥಿತರಿದ್ದರು. ಶ್ರೀ ಎನ್ ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಕಾರ್ಯಕ್ರಮದ ನಂತರ ಎಲ್ಲರಿಗೂ ಊಟದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಅ

***ಅಭಿಮತ ವರದಿ***










# ಯಕ್ಷಗಾನಕ್ಕೆ ಹೊಸ ಆಯಾಮ ನೀಡಿದ ಪಟ್ಲ

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ಮಂಗಳೂರು ಇದರ ದೆಹಲಿ ಘಟಕದ ವತಿಯಿಂದ 'ಯಕ್ಷಾಭಿಮಾನಿಗಳೊಂದಿಗೆ ಪರಸ್ಪರ ಒಂದು ವಿಶೇಷ ಸಭೆ'ಯು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಇತ್ತೀಚೆಗೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ಮಂಗಳೂರು ಇದರ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು "ಯಕ್ಷಗಾನವನ್ನು ಮೊತ್ತ ಮೊದಲಿಗೆ ವಿದೇಶಕ್ಕೆ ಕೊಂಡು ಹೋದವರು ಡಾ. ಕೆ. ಶಿವರಾಮ ಕಾರಂತರು ಎಂದು ಹೇಳಿದರು. ಅಂದಿನ ಆ ಪ್ರದರ್ಶನಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿತ್ತು. ಆದರೆ ಪಾರಂಪರಿಕ ಯಕ್ಷಗಾನವನ್ನು ವಿದೇಶದಲ್ಲಿ ಪ್ರದರ್ಶಿಸಿದವರು ಶ್ರೀ ಸರವು ಕೃಷ್ಣ ಭಟ್ ಅವರು. ತನ್ನ ನಿರ್ದಿಷ್ಟ ವ್ಯಾಪ್ತಿಯಿಂದ ಹೊರ ಬಂದಾಗ ಪ್ರದರ್ಶನಗಳಲ್ಲಿ ಒಂದಿಷ್ಟು ಬದಲಾವಣೆಗಳು ಸಹಜವಾಗಿ ಆಗಿವೆ. ಅದೇ ರೀತಿಯಲ್ಲಿ ಇಂದು ಪರಂಪರೆಯ ಚೌಕಟ್ಟಿನೊಳಗೆ ಯಕ್ಷಗಾನಕ್ಕೊಂದು ಹೊಸ ಆಯಾಮ ನೀಡಿ ಯಕ್ಷಗಾನವನ್ನು ಮಗದೊಮ್ಮೆ ಜನಾಕರ್ಷಣೆಯತ್ತ ಕೊಂಡೊಯ್ಯುತ್ತಿರುವವರಲ್ಲಿ ಶ್ರೀ ಸತೀಶ್ ಪಟ್ಲ ಪ್ರಮುಖರು. ಜೊತೆಗೆ ತಮ್ಮದೇ ಆದ 'ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ಮಂಗಳೂರು' ಸಂಸ್ಥೆಯನ್ನು ಸ್ಥಾಪಿಸಿ ಈ ಮೂಲಕ ಅಶಕ್ತ ಕಲಾವಿದರಿಗೆ ನೆರವಾಗುತ್ತಿರುವ ಇವರ ಕಾರ್ಯ ಶ್ಲಾಘನೀಯ'ಎಂದು ಹೇಳಿದರು.

ಯಕ್ಷಗಾನದ ಕುರಿತಾದ ನಾವು ಕಂಡ ವಿಶೇಷ ಘಟನೆಗಳು ಮತ್ತು ಅನುಭವಗಳನ್ನು ಡಾ। ಅಹಲ್ಯಾ ಚಿಂತಾಮಣಿ, ಡಾ। ಅವನೀಂದ್ರನಾಥ ರಾವ್, ಅನಂತ ಭಟ್, ಕೆ.ಎಸ್.ಜಿ. ಶೆಟ್ಟಿ, ಅರವಿಂದ ಬಿಜೈ ಹಾಗೂ ರಾಘವೇಂದ್ರ ನಾಯ್ಕ್ ಅವರು ಬಹಳ ಸೊಗಸಾಗಿ ಹಂಚಿಕೊಂಡರು. ಹಾಗೂ ಈ ಕಾರ್ಯಕ್ರಮದಲ್ಲಿ ದೆಹಲಿಯಲ್ಲಿರುವ ಯಕ್ಷಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ, ಮುಂದಿನ ದಿನಗಳಲ್ಲಿ ದೆಹಲಿಯಲ್ಲಿ ಯಕ್ಷಗಾನಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ನಡೆಸುವ ಕುರಿತಾಗಿ ತಮ್ಮ ಅಭಿಪ್ರಾಯ, ಸಲಹೆಗಳನ್ನು ನೀಡಿದರು. ಭಾರತ ಸರಕಾರದ ಕೃಷಿ ಸಚಿವಾಲಯದ ಉಪ ನಿರ್ದೇಶಕರಾದ ಶ್ರೀ ಪ್ರಸನ್ನ ಸಾಲ್ಯಾನ್ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ಎಂ. ನಾಗರಾಜ ಅವರು ಉಪಸ್ಥಿತರಿದ್ದರು. ಸಂಚಾಲಕರಾದ ಕಾರ್ತಿಕ್ ರೈ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಅ

**ಅಭಿಮತ ವರದಿ**

## ಶೈಕ್ಷಣಿಕ ಸಾಧನೆ



ಹತ್ತನೇ ತರಗತಿಯಲ್ಲಿ CGPA -10 ಸಾಧನೆ ಮಾಡಿದ ನವಯುಗ್ ಶ್ರೀರಾಮ್ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳಾದ ಶ್ರೀ ನರಸಿಂಹ ಮೂರ್ತಿ ಎಸ್ ಮತ್ತು ಶ್ರೀಮತಿ ರೂಪಶ್ರೀ ಎಸ್ ಅವರ ಪುತ್ರ.
ಪ್ರಸ್ತುತ ಆಂಧ್ರ ಎಜ್ಯುಕೇಶನ್ ಸೊಸೈಟಿ, ಜನಕಪುರಿಯ ವಿದ್ಯಾರ್ಥಿ.
ದೆಹಲಿ ಕರ್ನಾಟಕ ಸಂಘದ ಪರವಾಗಿ ಶುಭವನ್ನು ಕೋರುತ್ತೇವೆ ಅ




# ಗುರ್‌ಗಾಂವ್‌ನಲ್ಲಿ ಸತ್ಯನಾರಾಯಣ ಪೂಜೆ

ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಗುರ್‌ಗಾಂವ್ ಕನ್ನಡ ಸಂಘದ ವತಿಯಿಂದ ಸಾರ್ವಜನಿಕ ಸತ್ಯನಾರಾಯಣ ಪೂಜೆಯನ್ನು ತುಂಬಾ ಭಕ್ತಿ ಮತ್ತು ಶ್ರದ್ಧೆಯಿಂದ ಇದೇ ಜುಲೈ 30ರಂದು ಹರಿಯಾಣದ ಗುರ್‌ಗಾಂವ್ ನಗರದಲ್ಲಿರುವ ರಾಧಾಕೃಷ್ಣ ಹಾಲ್‌ನಲ್ಲಿ ನಡೆಸಲಾಯಿತು. ಸುಮಾರು 400ಕ್ಕೂ ಹೆಚ್ಚು ಮಂದಿ ಕನ್ನಡಿಗರು ಸಕುಟುಂಬ ಸಮೇತರಾಗಿ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಸಹ ಈ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅ

**ಕೃಷ್ಣಪ್ಪ ಎಂ**

# ನನ್ನ ಬಾಳಿನ ನೆನಪಿನ ಸುರಳಿ. . .

ನಮ್ಮ ತಾಯಿಯ ತೌರೂರು ಹೊಳೇನರಸೀಪುರ. ನಮ್ಮ ತಾಯಿ ನನ್ನ ತಮ್ಮನ ಹೆರಿಗೋಸ್ಕರ ಹೊಳೇನರಸೀಪುರಕ್ಕೆ ಹೋದಾಗ ನನಗೆ ಎರಡು ವರುಷ. ಆಗಿನ ಕಾಲದಲ್ಲಿ ಬಾಣಂತನ ತವರು ಮನೆಯಲ್ಲಿ ಐದು ತಿಂಗಳು ನಡೆಯುತಿತ್ತು. ಆಗ ಅಲ್ಲಿ ಒಂದು ಶಿಶು ವಿಹಾರ ತೆರೆದರು. ಅದರ ಆರಂಭಕ್ಕೆ ಮೈಸೂರು ಮಹಾರಾಜರನ್ನು ಕರೆಸಿದ್ದರು. ಆದಿನ ನನ್ನನ್ನೂ ನನ್ನ ಸೋದರಮಾವನ ಮಗಳನ್ನೂ ಅಲಂಕರಿಸಿ ಮಹಾರಾಜರಿಗೆ ಆರತಿ ಎತ್ತುವುದಕ್ಕೆ ತಯಾರಿಸಿದ್ದರು. ಮಹಾರಾಜರಿಗೆ ಆರತಿ ಎತ್ತಿದಾಗ ಮಹಾರಾಜರು ನನ್ನ ಬೆನ್ನುತಟ್ಟಿ ಯಾರಮ್ಮಾ ನೀನು ಎಂದಿದ್ದಕ್ಕೆ ನಾನು ಅಡ್ವೋಕೇಟ್ ಜಿ.ಎಸ್. ಪುಟ್ಟುರಾಯರ ಮಗಳೆಂದು ಉರು ಹೊಡೆದಿದ್ದನ್ನು ವದರಿದ್ದೆನಂತೆ. ಹೀಗೆಂದು ನನ್ನ ಅಜ್ಜಿ ಯಾವಾಗಲೂ ಹೆಮ್ಮೆಯಿಂದ ಹೇಳುತ್ತಿದ್ದರು.

ನನ್ನ ತಂದೆಯ ತಾಯಿ ಮಡಿ ಹೆಂಗಸರು. ಅವರನ್ನು ನಾವು ಕೆಂಪು ಸೀರೆ ಅಜ್ಜಿಯೆಂದು ಕರೆಯುತ್ತಿದ್ದೆವು. ಅವರಿಗೆ ನನ್ನ ಕಂಡರೆ ತುಂಬಾ ಪ್ರೀತಿ. ಪ್ರಾಯಶಃ ಕಾರಣ ನನ್ನ ತಾತ (ನಮ್ಮ ತಂದೆಯೇ ನೋಡದ ಅವರ ತಂದೆ–ಅಮ್ಮಜ್ಜಿ ಬಸರಿಯಾಗಿದ್ದಾಗಲೆ ನನ್ನ ತಾತ ಆಕಸ್ಮಿಕಕ್ಕೆ ಒಳಗಾಗಿ ತೀರಿಕೊಂಡಿದ್ದರು)ನಾನು ನನ್ನ ಕಣ್ಣಿಗೇ ಕಾಣದ ತಾತನಂತೆ ಅವರನ್ನು ಹೋಲುತ್ತಿದ್ದೆನಂತೆ–ಅದಕ್ಕೆ ತುಂಬಾ ಪ್ರೀತಿ! ಯಾವಾಗಲೂ ಅವರ ಸೀರೆಯ ಬಾಳೆಕಾಯಿಯಲ್ಲಿ ಕಾಯಿ ಬೆಲ್ಲ ಮುಚ್ಚಿಟ್ಟುಕೊಂಡು ನನಗೆ ಕೊಡುತ್ತಿದ್ದರು. ನಮ್ಮಜ್ಜಿಗೆ ಉಡಲು ಕೆಂಪು ಸೀರೆ (ಹೊಸದಾಗಿ) ತಂದಾಗ ನಮ್ಮಜ್ಜಿ ಅಹಲ್ಯಾ ಒಂದು ನಿಮಿಷ ಸುತ್ತಿಕೊಂಡು ನೀರಲ್ಲಿ ನೆನಸಿಡು ಎನ್ನುತ್ತಿದ್ದರು. ಒಂದು ಬಾರಿ ಹೊಸ ಸೀರೆ ನಮ್ಮಜ್ಜಿ ಉಡುವಂತೆಯೇ ಉಟ್ಟು, ತಲೆ ಮುಸುಕನ್ನು ಕಿವಿಯ ಹಿಂಭಾಗದಲ್ಲಿ ಸಿಕ್ಕಿಸಿಕೊಂಡು ಮೈ ಕಾಣದಂತೆ ಸೆರಗದು ಮುಚ್ಚಿ ಸೊಂಟಕ್ಕೆ ಸಿಕ್ಕಿಸಿಕೊಂಡು ಅಜ್ಜಿಯನ್ನು "ನಾನು ಹೇಗೆ ಕಾಣಿಸುತ್ತೇನೆ ಅಜ್ಜಿ ಎಂದಾಗ ಅವರು ಅಯ್ಯೋ ಮುಂಡೇದೆ ಮೊದಲು ಹೋಗಿ ಬದಲಾಯಿಸು, ಯಾವ ಜನ್ಮಕ್ಕೂ ಈ ವೇಷ ಬೇಡ" ಎಂದು ಚೆನ್ನಾಗಿ ಬೈದ ನೆನಪು! ನಾನು ವಿಧವೆಯಾದರೂ ಅಂತಹ ವೇಷವಿಲ್ಲದ ಈ ಕಾಲಕ್ಕೆ ಸೇರಿದವಳು. ಆದರೆ ನಾನು ನಾಟಕಗಳಲ್ಲಿ ಅದೇ ವೇಷದ ಅತ್ತೆ, ಅಜ್ಜಿಯಾಗಿ ಪಾತ್ರಮಾಡಿ ಉತ್ತಮ ನಟಿ ಪ್ರಶಸ್ತಿ ಪಡೆದಿದ್ದೇನೆ. ಈ ಮುಗ್ಧ ನೆನಪು ಅವರಿಗೆ ಶ್ರದ್ಧಾಂಜಲಿ.

ನನ್ನ ತಾಯಿಯ ತಾಯಿ ಬಿಳಿ ಸೀರೆ ಅಜ್ಜಿ. ಅವರು ವಿಧವೆಯಾದ ಮೇಲೆ ಇರುವವರೆಗೂ ಮುಂಬಯಿಯ ಹತ್ತಿಯ ಮಿಲ್ ಸೀರೆ ಬಿಳೀ ಬಣ್ಣದ್ದು ಉಡುತ್ತಿದ್ದರು. ಅವರು ಹದಿನಾಲ್ಕು ಮೊಳದ ಸೀರೆ ಉಡುತ್ತಿದ್ದರು. ಆದರೆ ಮುಂಬಯಿ ಸೀರೆಗಳು  ಒಂಬತ್ತು ಗಜದ ಸೀರೆಗಳು ಅದಕ್ಕಾಗಿ ಅವರು  ಎರಡು ಗಜ ಕತ್ತರಿಸಿ ನನಗೆ ತಾವೇ ಬಹಳ ಸುಂದರ ಲಂಗ ಫ್ರಾಕ್, ಅಂಬ್ರೆಲ್ಲಾ ಫ್ರಾಕ್ ಹೊಲಿದು ಕೊಡುತ್ತಿದ್ದರು. (ಅವರು ಆ ಕಾಲಕ್ಕೆ ಇಂಗ್ಲೀಷ್ ದರ್ಜಿಯಿಂದ ಗಂಡಸರ ಸೂಟ್ ಹೊಲಿಯುವುದನ್ನು ಕಲಿತಿದ್ದರಂತೆ) ನಾನು ಆ ಲಂಗಗಳನ್ನು ಹಾಕಿಕೊಂಡು ಅವರಿಗೆ ತೋರಿಸಬೇಕು. ಅವರು ಅಯ್ಯೋ ಪುಟ್ಟಿ ಎಷ್ಟು ಚೆನ್ನಾಗಿದ್ದಿಯೇ ಎಂದು ಉಪ್ಪು ಮೆಣಸಿನ ಕಾಯಿ ಸಾಸಿವೆಯಿಂದ ದೃಷ್ಟಿ ತೆಗೆದು ಒಲೆಗೆ ಹಾಕಿ ಅದು ಚಟ ಚಟ ಗುಟ್ಟಿದಾಗ ಅವರ ಮುಖದ ಸಂತೋಷ ನೆಮ್ಮದಿಯ ಚಿತ್ರಣ ಇಂದೂ ನನ್ನ ಕಣ್ಣ ಪಟದಲ್ಲಿ ಸುಳಿಯುತ್ತದೆ.

ನನ್ನ ಕಾಲೇಜು ವಿದ್ಯಾಭ್ಯಾಸದ ಮುಂಚೆ ಎಲ್ಲಾ ವಿದ್ಯಾಭ್ಯಾಸವೂ ಹಳ್ಳಿಗಳಲ್ಲೇ ಸಾಗಿತ್ತು. ನಮ್ಮ ತಂದೆ "ಪ್ರೈಮರಿ ಸ್ಕೂಲ್ ಮೇಷ್ಟ್ರು" ಆಗಿದ್ದರಿಂದ ಶಾಲೆಗಳು ಮನೆಯಿಂದ ದೂರವಿದ್ದ ಕಾರಣ ದಿನಾ ಶಾಲೆಗೆ ನನ್ನನ್ನು ಭುಜದ ಮೇಲೆ ಕೂರಿಸಿಕೊಂಡು ಐದಾರು ಮೈಲಿ ಹೋಗಿ ಬರುತ್ತಿದ್ದ ದಿನಗಳು! ಪಾಪ! ತಂದೆಯ ಕಷ್ಟಕ್ಕಿಂತ ಅವರ ಭುಜದ ಮೇಲೆ ಸವಾರಿ ನನಗೆ ಬಹಳ ಇಷ್ಟವಾಗಿತ್ತು.

ನನ್ನ ತಂದೆಯ ಊರು ಚಿಕ್ಕಮಗಳೂರು. ನಮ್ಮ ತಂದೆ ಮೊಟ್ಟಮೊದಲು ಚಿಕ್ಕಮಗಳೂರಿನಲ್ಲೇ ಕೆಲಸ ಪ್ರಾರಂಭಿಸಿದ್ದಂತೆ. ಆಗ ನನ್ನ ದೊಡ್ಡಪ್ಪ (ನನ್ನ ತಂದೆಯ ಅಣ್ಣ) ಅವರೂ ಅಲ್ಲಿ ತಹಶೀಲ್ದಾರರಾಗಿ ಕೆಲಸ ಮಾಡುತ್ತಿದ್ದರು. ಒಕ್ಕುಟುಂಬ. ನಮ್ಮ ತಂದೆ ಐದು ಗಂಟೆ ಬೆಳಗ್ಗೆ ಮನೆ ಬಿಟ್ಟರೆ ರಾತ್ರಿ ಏಳು ಗಂಟೆಗೆ ನೌಕರಿ, ಟ್ಯೂಷನ್ ಎಲ್ಲಾ ಮುಗಿಸಿಕೊಂಡು ಬರುತ್ತಿದ್ದರಂತೆ.

ನನ್ನ ದೊಡ್ಡಪ್ಪ ನನ್ನನ್ನು ಬಹಳ ಮುದ್ದು ಮಾಡುತ್ತಿದ್ದರು. ನಾನು ಎರಡು ಮೂರು ವರುಷದವರೆಗೂ ಅವರೇ ಜಾಸ್ತಿ ನೋಡಿಕೊಳ್ಳುತ್ತಿದ್ದರೆಂದು ನಮ್ಮಜ್ಜಿ ಹೇಳುತ್ತಿದ್ದರು. ಅವರು ನನಗೆ ಅಕ್ಷರ ಓದುವುದು ಎಲ್ಲಾ ಹೇಳಿಕೊಡುತ್ತಿದ್ದರಂತೆ. ಅವರು ನನ್ನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ತಾಯಿನಾಡು ಪೇಪರು ಓದುತ್ತಾ ನನಗೆ ಶಿರೋನಾಮೆ 'ತಾಯಿನಾಡು' ಎನ್ನುವುದನ್ನು ಬೆರಳಿಟ್ಟು ತೋರಿಸಿ ಬಾಯಿಪಾಟ ಮಾಡಿಸಿದ್ದರಂತೆ. ಯಾರು ಬಂದರೂ ಪೇಪರ್ ತೋರಿಸಿ ಇದೇನು ಹೇಳು ಪುಟ್ಟಿ ಎಂದರೆ ನಾನು ಗಟ್ಟಿಯಾಗಿ 'ತಾಯಿನಾಡು' ಎಂದಾಗ ಅವರಿಗೆ ಹೆಮ್ಮೆಯೋ ಹೆಮ್ಮೆ! ನೋಡಿದಿರಾ 'ನನ್ನ ತಮ್ಮನ ಮಗಳು' ಎಷ್ಟು ಜಾಣೆ ಎಂದು. ಹೆಮ್ಮೆಯಿಂದ ಹೇಳುತ್ತಿದ್ದರಂತೆ. ಎಂತಹಾ ಸವಿನೆನಪು.

ನನ್ನ ತಾಯಿ ನಾನು ಯಾವಾಗಲಾದರು ಮೊಂಡಾಟ ಮಾಡಿದಾಗ ಚೆನ್ನಾಗಿ ಬೈದು ಹೊಡೆದುಬಿಡುತ್ತಿದ್ದರು. ರಾತ್ರಿ ನಾನು ಮಲಗಿದ್ದಾಗ ಬಂದು ಮೈ ಸವರಿ ಕಣ್ಣೀರು ಹಾಕಿ ಮಾರನೆ ಬೆಳಗ್ಗೆ ಮೈಕೈಗೆ ಎಣ್ಣೆ ಸವರಿ ಬಿಸಿ ಬಿಸಿ ನೀರು ಹಾಕುತ್ತಿದ್ದ ದಿನಗಳು ಇನ್ನೆಲ್ಲಿ.

ಹಳ್ಳಿ ಶಾಲೆಗಳಲ್ಲಿ ಸಹಪಾಠಿಗಳು (ಹುಡುಗಿ–ಹುಡುಗರು) ನಾನು ಮೂರು ನಾಲ್ಕನೇ ತರಗತಿಯಲ್ಲಿದ್ದರೂ ಸಾಧಾರಣವಾಗಿ ಹೆದರುತ್ತಿರಲಿಲ್ಲ. ಗಂಡು ಹುಡುಗರು (ಆರು ಏಳನೆ ತರಗತಿಯವರು ಹೆಣ್ಣು ಹುಡುಗಿಯರನ್ನು ಕೆಲವು ಬಾರಿ ಅಸಹ್ಯವಾಗಿ ಕೀಟಲೆ ಮಾಡುತ್ತಿದ್ದರು. ಹಾಗಾದಾಗ ನಾನು ಹೆಡ್‌ಮಾಸ್ತರ್ ಹತ್ತಿರ ದೂರು ಕೊಟ್ಟಾಗ–ಒಂದು ಬಾರಿ ಅವರು ಆ ಹುಡುಗರನ್ನು ತನ್ನ ಕೋಣೆಗೆ ಕರೆದು ಸಾಲಾಗಿ ನಿಲ್ಲಿಸಿ ಚೆನ್ನಾಗಿ ಬೈದಿದ್ದಲ್ಲದೆ 'ನನ್ನನ್ನು' ನೀನು ಅವರ ಮೂಗು ಹಿಡಿದು ಕಪಾಳಕ್ಕೆ ಹೊಡಿ ಎಂದರು. ನಾನು ಹಿಂದು ಮುಂದು ನೋಡದೆ ಹೊಡೆದೇ ಬಿಟ್ಟೆ. ಮನೆಗೆ ಬಂದು ಬಹಳ ಗರ್ವದಿಂದ ನಮ್ಮ ತಂದೆ–ತಾಯಿಗೆ ಹೇಳಿದೆ. ಆಗ ನನ್ನ ತಂದೆ ಎಂದೂ ಜೋರಾಗಿ ಬೈದಿಲ್ಲದವರು. ನನಗೆ ಎರಡೇಟು ಕೊಟ್ಟು ನಾಳೆಯಿಂದ ಸ್ಕೂಲಿಗೆ ಹೋಗಕೂಡದೆಂಬ ಬೆದರಿಕೆ ಹಾಕಿದರು. ಕಾರಣ ಕೀಟಲೆ ಮಾಡಿದವರ ಪೈಕಿ ಹೆಡ್‌ಮಾಸ್ತರ್‌ರ ಮಗನೂ ಒಬ್ಬ. ಹಾ ಬೇಡಿ ಕಾಡಿ ಸ್ಕೂಲಿಗೆ ಮಾತ್ರ ನಾನು ಹೋದ ಆ ಮಧುರ ನೆನಪು!

ನಾನು ಬನಾರಸ್ (ಬಿಎಚ್‌ಯು)ನಲ್ಲಿ ಎಂ.ಎಸ್ಸಿ. ಓದುತ್ತಿದ್ದಾಗ ನನ್ನ ಇನ್ನಿಲ್ಲದ ದೊಡ್ಡ ಮಗ ಒಂದು ವರುಷ. ನಾನು ಸಸ್ಯಶಾಸದ ವಿಜ್ಞಾನಿಯಾಗುವ ಪ್ರಯತ್ನ. ಉತ್ತರ ಪ್ರದೇಶ ಹಳೇಕಾಲ (1960). ನಮ್ಮದು ಒಕ್ಕುಟುಂಬ ರಾತ್ರಿ ಮನೆ ಕೆಲಸ ಪೂರ್ತಿಯಾದ ಮೇಲೆ ಛತ್ ಮೇಲೆ ಹೋಗಿ ಮಿಣ ಮಿಣ ಬಿಲ್ಲಿನ ಬೆಳಕಿನಲ್ಲಿ ಓದಬೇಕು. ಸೆಖೆ ವಿಪರೀತ. ಆದರೆ ನನ್ನ ಪ್ರೀತಿಯ ಅತ್ತೆ ತಾವೂ ಛತ್ ಮೇಲೆ ಬಂದು ನನ್ನನ್ನು ಆಗಾಗ ಎಚ್ಚರಿಸಿ ಓದುವಂತೆ ಕೈ ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದುದು. ನನ್ನ ಜೊತೆ ತಾವು ನಿದ್ದೆ ಕೆಡಿಸುತ್ತಿದ್ದುದು ಎಂತಹಾ ಮಮತೆ ಹೊಂದಾಣಿಕೆಯ ನೆನಪು.

ನಾನು ಎರಡನೇ ಮಗನಿಗೆ ಬಸರಿಯಾಗಿದ್ದಾಗ ಒಂದು ಬಾರಿ ಗ್ರಹಣ. ಸೂರ್ಯಗ್ರಹಣ ಆ ಕಾಲದಲ್ಲಿ ಸ್ಕೂಲು ಶಾಲೆಗಳಿಗೆ ರಜ. ಗ್ರಹಣ ಬಸರಿಯರು ಗ್ರಹಣ ನೋಡಬಾರದೆಂದು ನನ್ನ ಇನ್ನಿಲ್ಲದ ಮೈದುನ ರೂಮಿಂದ ಕಿಡಕಿ–ಕಂಡಿಗಳನ್ನೆಲ್ಲಾ ಮುಚ್ಚಿ–ಗ್ರಹಣ ಬಿಡುವವರೆಗೂ ಹೊರ ಬರಬೇಡಿ ಎಂದು ಸೆಕ್ಯೂರಿಟಿ ಗಾರ್ಡ್ ತರಹ ನೋಡಿಕೊಂಡ ಮೈದುನ!

ನಾನು ಎರಡನೇ ಮಗನ ತಾಯಿಯಾಗುವಾಗ ಪಿ.ಎಚ್.ಡಿ. ಮಾಡುತ್ತಿದ್ದೆ. ಆಗ ಮೆಟರ್‌ನಿಟಿ ಲೀವ್ ಕೇವಲ 40 ದಿವಸಗಳು. ಅವನು ಹುಟ್ಟಿದ ದಿನದಿಂದ ಶುರುವಾದ ನಲ್ವತ್ತು ದಿನಗಳು ಮುಗಿದಿದ್ದೇ ತಿಳಿಯಲಿಲ್ಲ. ನಾನು ಸಂಶೋಧನೆ ಮತ್ತು ಅಧ್ಯಾಪಕ ವೃತ್ತಿ ಎರಡನ್ನೂ ಒಟ್ಟಿಗೇ ಬಿ.ಎಚ್.ಯು. ನಲ್ಲಿ ಮಾಡುತ್ತಿದ್ದ ಕಾರಣ ಒಂಭತ್ತು ಗಂಟೆಯಿಂದ ಸಾಯಂಕಾಲ ಆರು ಗಂಟೆವರೆಗೂ ಕೆಲಸ ಕಾಲೇಜಿನಲ್ಲಿ. ನಾನು ನನ್ನ ಮಗುವಿಗೆ ಎದೆ ಹಾಲು ಕೊಡುವ ನಿರ್ಧಾರ. ಆಗ ನನ್ನ ಅತ್ತೆ–ಮಾವ ಇಬ್ಬರೂ ದಿನಕ್ಕೆ ಮೂರು ಬಾರಿ ಕಾರಿನಲ್ಲಿ ನನ್ನ ಮಗನನ್ನು ಕಾಲೇಜಿಗೆ ಕರೆದುಕೊಂಡು ಬಂದು ನಾನು ಕಾರಿನಲ್ಲಿ ಅವನಿಗೆ ಹಾಲು ಕುಡಿಸಿ ಕೊಡುವ ನಿಯಮ ಬಹಳ ಚೆನ್ನಾಗಿ ಪಾಲನೆ ಆಯಿತು.

ಸಹಕಾರ ಪ್ರೀತಿ, ಎಂದರೇನು? ಎನ್ನುವ ನೆನಪು ಕಾಡುತ್ತೆ. ನನ್ನ ಇನ್ನಿಲ್ಲದ ದೊಡ್ಡ ಮಗ ಪ್ರತಿ ಭಾನುವಾರ ಮಧ್ಯಾಹ್ನ ತಂದೆ–ತಾಯಿಯರಿಗೆ ಕಾಫಿ ಮಾಡಿ ನಗುತ್ತಾ ಕೊಡುವ ದೃಶ್ಯ! ಐದು ವರುಷದ ನನ್ನ ಎರಡನೇ ಮಗ ನಾನು ಸಸ್ಯಶಾಸ್ತ್ರದ ಸಲುವಾಗಿ ಹೋಗುವ ಪ್ರವಾಸದಿಂದ ಹಿಂತಿರುಗುವ ದಿವಸ ಸಾಯಂಕಾಲ ಮಾಡಿದ ಅಡಿಗೆಯನ್ನು ಸುಮ್ಮನೆ ಗ್ಯಾಸ್ ಸ್ಟವ್ ಮೇಲೆ ಇಟ್ಟು ಕಡ್ಡಿಗೀರಿ ಒಲೆ ಹಚ್ಚಿ–ಎರಡು ನಿಮಿಷಕ್ಕೆ ಆರಿಸಿ ಅಮ್ಮಾ ಊಟ ಮಾಡು ಎಂದು ಹೇಳುತ್ತಿದ್ದ ದೃಶ್ಯ–ಏನೆಲ್ಲಾ ಹಿತ. ಇದೆಲ್ಲಾ ಜೀವನ ಕಲಿಸುವ ಪಾಠಗಳು. ಸಹನೆ ಸಕುಟುಂಬ ಪರಸ್ಪರ ಸಂಯಮ, ನಿರ್ಧಾರ ಕಷ್ಟ–ನಿಷ್ಟುರ ಎಲ್ಲವೂ ಕಲಿಸಿದ ಪಾಠಗಳು ಇದನ್ನು ಮರೆಯಲಾಗದು. ಎಪ್ಪತ್ತೆಂಟು ವರುಷದ ನನಗೆ ಇವೆಲ್ಲಾ ಮಧುರ ಕ್ಷಣಗಳ ಸವಿನೆನಪು. ಅ

***ಡಾ. ಅಹಲ್ಯಾ ಚಿಂತಾಮಣಿ***



# ಅಗಲಿದ ಅಣ್ಣನಿಗೆ ಶ್ರದ್ಧಾಂಜಲಿ

ಇತ್ತೀಚೆಗೆ ಅಗಲಿದ ದೆಹಲಿಯ ಹಿರಿಯ ರಂಗಕರ್ಮಿ **ಎಚ್.ಎಸ್. ಕುಲಕರ್ಣಿ** ಅವರ ನಿಡುಗಾಲದ ಗೆಳೆಯ **ಸುಧಾಕರ ಕುರಂದವಾಡ** ಅವರು ಅರ್ಪಿಸುವ ಶ್ರದ್ಧಾಂಜಲಿ


ಶ್ರೀ ಎಚ್.ಎಸ್. ಕುಲಕರ್ಣಿ (ಹನುಮಂತರಾವ್ ಶಂಕರರಾವ್ ಕುಲಕರ್ಣಿ)ಯವರನ್ನು ನಾನು ದೆಹಲಿಗೆ ಬಂದಾಗಿನಿಂದ ಬಲ್ಲೆ. ಸರೋಜಿನಿ ನಗರದ ಎಮ್. ಬ್ಲಾಕಿನಲ್ಲಿ ನನಗೆ ಸಿ.ಪಿ.ಡಬ್ಲ್ಯು.ಡಿ. ಕ್ವಾರ್ಟರ್ (ಎಂ–149) ಸಿಕ್ಕಿತ್ತು. ಅಲ್ಲಿಂದ ಮಾರ್ಕೆಟ್ಟಿಗೆ ಹೋಗುವಾಗ ದಾರಿಯಲ್ಲಿ ಜೆ–210ರಲ್ಲಿ ಶ್ರೀ ಬಿ.ಆರ್. ಸಿದ್ಧಾಂತಿಯವರು ವಾಸವಾಗಿದ್ದರು. ಮೊದಲು ಅವರ ಪರಿಚಯವಾಯಿತು. ನಂತರ ದೀಪಾವಳಿ ಹಬ್ಬದಲ್ಲಿ (1973) ಅವರ ಮನೆಗೆ ಪಗಡೆ ಆಟ ಆಡಲು ಹಾಗೂ ಹಬ್ಬದ ಊಟ ಮಾಡಲು ಸುಮಾರು ನಲ್ವತ್ತು–ನಲ್ವತ್ತೈದು ಜನ ಸೇರಿದ್ದರು. ಅವರಲ್ಲಿ ಮುಖ್ಯವಾಗಿದ್ದವರೆಂದರೆ ಎಚ್. ಎಸ್. ಕುಲಕರ್ಣಿ, ಡಿ.ಎಚ್. ಕುಲಕರ್ಣಿ, ಬಿ.ಎಫ್. ಮುರಗೋಡ ಅವರ ಅಣ್ಣ ಈಶ್ವರಪ್ಪ ಮುರಗೋಡ, ಎಚ್.ಎಸ್. ಪಾಟೀಲ್, ಬೀಳಗಿಯವರು, ಜೋಶಿ (ಬಬಲೇಶ್ವರ) ಯವರು ಕುಟುಂಬ ಸಹಿತ ಸೇರಿದ್ದರು. ಅಂದಿನಿಂದ ಕುಲಕರ್ಣಿಯವರ ಪರಿಚಯ ಬೆಳೆದು ಪ್ರೇಮ–ವಿಶ್ವಾಸಗಳಿಂದ ಕೂಡಿಕೊಂಡು ದೆಹಲಿ ಕರ್ನಾಟಕ ಸಂಘದ, ಜನಕಪುರಿ ಕನ್ನಡ ಕೂಟದ ನಾಟಕ ಕಾರ್ಯಕ್ರಮಗಳ ಮೂಲಕ ನನ್ನನ್ನು ಏಕವಚನದಲ್ಲಿ ಕರೆಯುತ್ತ ಕುಲಕರ್ಣಿಯವರು ನನ್ನ ಒಡಹುಟ್ಟಿದ ಅಣ್ಣನಂತೆ ವಾತ್ಸಲ್ಯಮಯಿಯಾಗಿ ನನ್ನ ಜೀವನದಲ್ಲಿ ಅಚಲರಾಗಿದ್ದಾರೆ.

ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ 1978ರಲ್ಲಿ ನವದೆಹಲಿಯ ಮಾವಳಂಕರ್ ಹಾಲಿನಲ್ಲಿ ನಾಡೋಜ ಡಾ. ದೇಶಹಳ್ಳಿ ಜಿ. ನಾರಾಯಣರವರ ಪರಿಷತ್ತಿನ ಅಧ್ಯಕ್ಷತೆಯಲ್ಲಿ ಹಾಗೂ ಅಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರ ಮುಖ್ಯ ಅತಿಥಿಗಳಾಗಿದ್ದ ಪ್ರಮೇಯದಲ್ಲಿ ದೆಹಲಿ ಸಂಘಟನೆಯ ಕಾರ್ಯದರ್ಶಿಗಳಾಗಿದ್ದರು. ಶ್ರೀ ಎಚ್.ಎಸ್. ಕುಲಕರ್ಣಿಯವರು, ಅವರ ನಿರ್ದೇಶನದ ಅಡಿಯಲ್ಲಿ ನನ್ನಿಂದಾದ ಕನ್ನಡ ಮಾತೆಯ ಸೇವೆ ಸಲ್ಲಿಸಿದೆ. ನಂತರ ಹಲವು ಬಾರಿ "ಕನ್ನಡ ಭಾರತಿ" ಸಂಸ್ಥೆಯಲ್ಲಿ ನನಗೂ ನಾಟಕ ಮಾಡಲು ಹೇಳಿದ್ದರು. ಆದರೆ ರಕ್ಷಣಾ ಪಡೆಯಲ್ಲಿದ್ದ ಕಾರಣ ವರ್ಗಾವರ್ಗಿಗಳ ಮೂಲಕ ನನಗೆ ಆ ವೇಳೆಯಲ್ಲಿ ಅವರೊಂದಿಗೆ ನಾಟಕದಲ್ಲಿ ಪಾತ್ರ ವಹಿಸಲು ಆಗಲಿಲ್ಲ. ಆದರೆ ಮುಂದೆ 1997ರ ನಂತರ ನಾನು ಮಿಲಿಟರಿಯಿಂದ ನಿವೃತ್ತನಾದ ನಂತರ ಕುಲಕರ್ಣಿಯವರೊಂದಿಗೆ ಹಲವಾರು ನಾಟಕಗಳಲ್ಲಿ ಪಾತ್ರ ವಹಿಸುವಂತಾಯಿತು. ಅವುಗಳಲ್ಲಿ ಅವರ 'ದೇವರು ಎದ್ದು ಬಂದಾಗ' ನಾಟಕ ಮುಖ್ಯವಾದುದು.


ಕುಲಕರ್ಣಿಯವರಿಗೆ ನಾಟಕದ ಹುಚ್ಚು ಮೊದಲಿನಿಂದಲೂ ಇತ್ತು ಅವರು ನಾಟಕದ ಕುಲಕರ್ಣಿಯವರೆಂದೇ ಪ್ರಸಿದ್ಧರಾಗಿದ್ದರು. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದ ವತಿಯಿಂದ ಪ್ರದರ್ಶನ ಮಾಡಿ ಬಂದಿದ್ದೇನೆ. ಆಗ ದಿ. ಕೆ.ಆರ್. ನಾಗರಾಜ್ ಕೂಡ ಅಲ್ಲಿ ಅಂದಿನ ನಾಟಕದಲ್ಲಿ ಭಾಗವಹಿಸಿದ್ದರು. ಕುಲಕರ್ಣಿಯವರು ಕೇವಲ ಕನ್ನಡ ನಾಟಕಗಳಲ್ಲಿ ಮಾತ್ರ ಭಾಗವಹಿಸುತ್ತಿದ್ದಿಲ್ಲ. ಭಾಷೆ ಯಾವುದೇ ಇರಲಿ. ಹಿಂದಿ–ಇಂಗ್ಲೀಷ್ ಮತ್ತಿತರ ಭಾಷೆಯ ನಾಟಕಗಳಲ್ಲಿಯೂ ಭಾಗವಹಿಸುತ್ತಿದ್ದರು. ಮರಾಠೀ ಭಾಷೆಯ ಪ್ರಭಾವ ಕನ್ನಡಕ್ಕಿದ್ದಷ್ಟೇ ಇದ್ದು, ಹಲವಾರು ಮರಾಠೀ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಆಡಿದ್ದಾರೆ ಹಾಗೂ ತಮ್ಮ ನಿರ್ದೇಶನದ ಅಡಿಯಲ್ಲಿ ಆಡಿಸಿದ್ದಾರೆ.

ಜನಕಪುರಿ ಕನ್ನಡ ಕೂಟ ಪ್ರಾರಂಭವಾದಾಗಿನಿಂದಲೂ (1976) ಕೂಟಕ್ಕೆ ಹಲವು ಬಾರಿ ಅಧ್ಯಕ್ಷರಾಗಿದ್ದರೂ, ಅವರ ಕಾರ್ಯ ಕುಶಲತೆಯನ್ನು ಅರಿತ ಸದಸ್ಯರು ಕೂಟದ ರಜತ ಮಹೋತ್ಸವದ ಹೊತ್ತಿಗೆ ಪುನಃ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದರು. ಕರ್ನಾಟಕ ಭವನದಲ್ಲಿ ನೆರವೇರಿದ ಅಂದಿನ ರಜತ ಕಾರ್ಯಕ್ರಮ ಸ್ಮರಣೀಯವಾಗಿದೆ. ಸ್ಮರಣ ಸಂಚಿಕೆಯನ್ನು ಪ್ರಕಟಿಸಿ ಅದ್ಭುತ ಪ್ರದರ್ಶನವನ್ನು ನೀಡಿದರು. ಜನಕಪುರಿ ಕನ್ನಡ ಕೂಟ ಇವರಿಗೆ "ಕೂಟರತ್ನ"ವನ್ನು ನೀಡಿ ಸನ್ಮಾನಿಸಿದೆ. ಪ್ರತಿ ವರುಷ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುವ ನಾಟಕ ಸ್ಪರ್ಧೆಯನ್ನು ಹುಟ್ಟಿ ಹಾಕಿದವರಲ್ಲಿ ಶ್ರೀ ಕುಲಕರ್ಣಿಯವರೂ ಇದ್ದರು. ದೆಹಲಿ ಕರ್ನಾಟಕ ಸಂಘವು ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಕೊಡಿಸುವುದರ ಮೂಲಕ ಹಾಗೂ ಅವರ ನಾಟಕಗಳನ್ನು ಪ್ರಕಟಿಸುವ ಮೂಲಕ ತನ್ನ ಗೌರವವನ್ನೂ ಹೆಚ್ಚಿಸಿಕೊಂಡಿದೆ. ಹಲವಾರು ಬಾರಿ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಹಾಗೂ ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯಲ್ಲಿಯೂ ಸದಸ್ಯ, ಉಪಾಧ್ಯಕ್ಷರ ಕಾರ್ಯ ನಿರ್ವಹಿಸಿ ಕನ್ನಡಕ್ಕಾಗಿ ಕೆಲಸ ಮಾಡಿದ್ದಾರೆ. ಅವರ ಸೇವೆಯನ್ನು ದೆಹಲಿ ಕನ್ನಡಿಗರು ಮರೆಯುವಂತಿಲ್ಲ.

ಅವರು ಜುಲೈ 15 (ಶನಿವಾರ)ರಂದು ಮಾಂದಾಪುರಿಯ ತಮ್ಮ ಸ್ವಗೃಹ ನರ್ಮದಾ ನಿವಾಸದಲ್ಲಿ ನಮ್ಮನ್ನೆಲ್ಲ ಅಗಲಿ ಹೋಗಿದ್ದಾರೆ. ಎಂಭತ್ತೇಳು ವರುಷದ ಕುಲಕರ್ಣಿಯವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಬಿಟ್ಟು ಭಗವಂತನಲ್ಲಿ ಲೀನವಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿದ್ದೇನೆ. ಇದು ನನ್ನ ಶ್ರದ್ಧಾಂಜಲಿ. ಅ



## ಶ್ರದ್ಧಾಂಜಲಿ



### ಎಚ್.ಎಸ್. ಕುಲಕರ್ಣಿ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಹಾಗೂ ದೆಹಲಿ ಕನ್ನಡ ರಂಗ ಭೂಮಿಯ ಹಿರಿಯ ಚೇತನ ಶ್ರೀ ಎಚ್. ಎಸ್. ಕುಲಕರ್ಣಿ ಅವರು ಜುಲೈ 15ರಂದು ನಿಧನರಾದರು. ದೆಹಲಿ ಕರ್ನಾಟಕ ಸಂಘವು ಕುಲಕರ್ಣಿ ಅವರ 'ಕಿತ್ತೂರಿನ ಕೆಚ್ಚೆದೆಯ ರಾಣಿ ಚೆನ್ನಮ್ಮ' ಮತ್ತು 'ದೇವರು ಎದ್ದು ಬಂದಾಗ' ನಾಟಕ ಕೃತಿಗಳನ್ನು ಹೊರತಂದಿದೆ.



### ಛಾಯಾ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ, ಸಂಘದ ಸೀನಿಯರ್ ವ್ಯವಸ್ಥಾಪಕ ಶ್ರೀ ಬಾಲಚಂದ್ರ ಅವರ ಧರ್ಮಪತ್ನಿ ಶ್ರೀಮತಿ ಛಾಯಾ ಅವರು ಜುಲೈ 23ರಂದು ನಿಧನರಾದರು.



### ಬಿ.ಎನ್. ರಾವ್

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿದ, ದೆಹಲಿ ಕರ್ನಾಟಕ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪುರಸ್ಕೃತ, ಸಂಘದ ಆಜೀವ ಸದಸ್ಯರಾದ ಶ್ರೀ ಬಿ.ಎನ್. ರಾವ್ ಆಗಸ್ಟ್ 5 ರಂದು ನಿಧನರಾದರು.

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಅಗಸ್ಟ್, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಅಗಸ್ಟ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 27 ಅಗಸ್ಟ್, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 27 ಅಗಸ್ಟ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ಕರ್ನಾಟಕ ವಾರ್ತಾ ಕೇಂದ್ರ ಹಾಗು ದೆಹಲಿ ಕರ್ನಾಟಕ ಸಂಘ, ನವದೆಹಲಿ**
**ಇವರ ಸಂಯುಕ್ತಾಶ್ರಯದಲ್ಲಿ**




**ರಿಶಬ್ ಶೆಟ್ಟಿ**
**ನಿರ್ದೇಶನದ**

## ಅತ್ಯುತ್ತಮ ಮನೋರಂಜನಾ ಚಿತ್ರ
## ಕಿರಿಕ್ ಪಾರ್ಟಿ

ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ, ನವದೆಹಲಿ
ದಿನಾಂಕ : 20.08.2017 ರಂದು ಸಂಜೆ : 5.00 ಗಂಟೆಗೆ

## ಎಲ್ಲರಿಗೂ ಆದರದ ಸ್ವಾಗತ

ಎಲ್.ಪಿ. ಗಿರೀಶ್
ಉಪನಿರ್ದೇಶಕರು
ಕರ್ನಾಟಕ ವಾರ್ತಾಕೇಂದ್ರ, ನವದೆಹಲಿ

ವಸಂತ ಶೆಟ್ಟಿ ಬೆಳ್ಳಾರೆ
ಅಧ್ಯಕ್ಷರು
ದೆಹಲಿ ಕರ್ನಾಟಕ ಸಂಘ, ನವದೆಹಲಿ

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ
ದೆಹಲಿ ಕರ್ನಾಟಕ ಸಂಘ, ನವದೆಹಲಿ

# ಜನಕಪುರಿ ಕನ್ನಡ ಕೂಟದ ವಾರ್ಷಿಕೋತ್ಸವ ಆಚರಣೆ

ಜನಕಪುರಿ ಕನ್ನಡಕೂಟದ ವಾರ್ಷಿಕೋತ್ಸವವನ್ನು ಜನಕಪುರಿಯ ಸನಾತನ ಧರ್ಮ ರಾಮ ಮಂದಿರ ಆವರಣದಲ್ಲಿ ಜುಲೈ 30ರಂದು ಕರ್ನಾಟಕದ ಬಾವುಟವನ್ನು ಹಾರಿಸುತ್ತ ಆಚರಿಸಲಾಯಿತು.

ಸಮಾರಂಭದ ಮುಖ್ಯ ಅತಿಥಿಯಾಗಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸರವು ಕೃಷ್ಣ ಭಟ್ ಭಾಗವಹಿಸಿದರು. ಸಂಘ ಸಂಸ್ಥೆಗಳನ್ನು ಕಟ್ಟಿ ಅವುಗಳನ್ನು ಹೇಗೆ ಉಳಿಸಿಕೊಂಡು ಹೋಗಬೇಕು ಎಂದು ಅವರು ತಮ್ಮ ಭಾಷಣದಲ್ಲಿ ವಿವರಿಸಿದರು. ಅವರು ಜನಕಪುರಿ ಕನ್ನಡಕೂಟದ ಕಾಯವೈಖರಿಯನ್ನು ಮೆಚ್ಚಿ ಪ್ರಶಂಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ನೇತ್ರಾವತಿ ಮಯ್ಯನವರಿಗೆ ಸನ್ಮಾನ ಮತ್ತು ಶ್ರೀ ಸಂಜೀವ್ ದೇಶಪಾಂಡೆಯವರಿಗೆ 'ಕೂಟ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕೂಟದ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಳುಗಳಿಗೆ ಶ್ರಿ ಕೃಷ್ಣ ಭಟ್ ಅವರು ಬಹುಮಾನಗಳನ್ನು ವಿತರಿಸಿದರು.

ಕೂಟಕ್ಕಾಗಿ ಬಹಳ ವರ್ಷಗಳಿಂದ ತನು, ಮನ, ಧನವನ್ನು ಅರ್ಪಿಸಿಕೊಂಡು ಬಂದಂತಹ ನೇತ್ರಾವತಿ ಮಯ್ಯನವರು ಹಿಂದಿನಿಂದಲೂ ಕೂಟಕ್ಕೆ ಪ್ರೇರಣಾಶಕ್ತಿಯಾಗಿದ್ದಾರೆ. ಅವರಿಗೆ ಶಾಲು, ಹೂ, ಹಣ್ಣು, ತಾಂಬೂಲಗಳನ್ನು ಕೊಟ್ಟು ಸನ್ಮಾನ ಮಾಡಲಾಯಿತು. ಶ್ರೀ ಸಂಜೀವ ದೇಶಪಾಂಡೆಯವರು ವಿವಿಧ ಚಟುವಟಿಕೆಗಳಲ್ಲಿ ತೋರಿಸಿದ ಕಾರ್ಯನೈಪುಣ್ಯತೆ, ನಾಟಕರಂಗದಲ್ಲಿ ಅಭಿನಯ ಮತ್ತು ಸಂಯೋಜನೆಯಲ್ಲಿ ನೀಡಿದ ಕೊಡುಗೆಗಳನ್ನು ಪರಿಗಣಿಸಿ ಅವರಿಗೆ ಕೂಟರತ್ನ ಪ್ರಶಸ್ತಿಯನ್ನು ನೀಡಲಾಯಿತು.

ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಜಯಶ್ರೀ ಬಸವರಾಜು, ಕೂಟದ ಉಪಾಧ್ಯಕ್ಷರಾದ ಡಾ. ಅಶೋಕ್ ಈ.ಟಿ. ಮತ್ತು ಕಾರ್ಯದರ್ಶಿ ಶ್ರೀ ಶೇಷಗಿರಿ ನಾಯಕ್ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶ್ರೀ ಶೇಷಗಿರಿ ನಾಯಕ್ ಅವರು ವಾರ್ಷಿಕ ವರದಿಯನ್ನು ಓದಿದರು. ಶ್ರೀ ಎಸ್. ಎಲ್. ಭಂಡಾರ್‌ಕರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಕೂಟದ ಖಜಾಂಚಿ ಶ್ರೀ ಎಂ.ವಿ. ವೆಂಕಟೇಶ್ ಅವರು ವಂದನಾರ್ಪಣೆ ಸಲ್ಲಿಸಿದರು.

ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸವಿತಾ ನೆಲ್ಲಿ, ಪ್ರೇರಣಾ ವೆಂಕಟೇಶ್, ಲಾವಣ್ಯ ಬಸವರಾಜು, ಮಮತಾ ಎಸ್. ಬಾಬು, ಜಯಶ್ರೀ ಬಸವರಾಜ್, ಮೋಹಿನಿ ರೈ, ಮಾಲಿನಿ ಪ್ರಹ್ಲಾದ್, ಅರ್ಪಿತಾ ಅವರು ಮಹಿಳಾ ಮಂಡಳಿಯ ವತಿಯಿಂದ ಸಮೂಹ ಗಾನ ಹಾಗೂ ಸಮೂಹ ನೃತ್ಯಗಳನ್ನು ಪ್ರದರ್ಶಿಸಿದರು. ರೂಪಶ್ರೀ, ರೂಪಶ್ರೀ ನರಸಿಂಹಮೂರ್ತಿ, ಎಂ.ಎಸ್. ಲಾವಣ್ಯ ಬಸವರಾಜು, ಜಯಶ್ರೀ ಬಸವರಾಜು ಅವರು ಕ್ರಮವಾಗಿ ಭಾವಗೀತೆ, ಭಕ್ತಿಗೀತೆಗಳನ್ನು ಹಾಡಿ ರಂಜಿಸಿದರು. ಚಿಕ್ಕ ಮಕ್ಕಳ ಸಮೂಹ ನೃತ್ಯದಲ್ಲಿ ಅಶ್ಮಿತ, ಐಶಾನಿ, ಅವನಿ, ಅದೋಕ್ಷಜ, ಸಿ.ಬಿ. ನಿತ್ಯ ಕುಣಿದು ಕುಪ್ಪಳಿಸಿದರೆ, ಸಿ.ಬಿ. ವೈಷ್ಣವಿ, ಮನುಶ್ರೀ ಸುಂದರ ಕನ್ನಡ ಹಾಡಿಗೆ ಹೆಜ್ಜೆ ಹಾಕಿದರು. ಮನುಶ್ರೀ ಶಾಸ್ತ್ರೀಯ ಸಂಗೀತವನ್ನು, ನಿಸರ್ಗ ಚಲನಚಿತ್ರ ಗೀತೆಯನ್ನು ಹಾಡಿದರು. ಡಾ. ಅಶೋಕ್ ಈ.ಟಿ. ಅವರು ಚಿತ್ರಗೀತೆಯನ್ನು ಹಾಡಿ ರಂಜಿಸಿದರು. ಆರಂಭದಲ್ಲಿ ಕು. ನಿತ್ಯ ಮತ್ತು ಶ್ರೀಮತಿ ಸವಿತಾ ಇನಾಂದಾರ್ ಅವರು ಪ್ರಾರ್ಥನೆಯನ್ನು ಪ್ರಸ್ತುತ ಪಡಿಸಿದರು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀಮತಿ ಸವಿತಾ ನೆಲ್ಲಿಯವರು ನಡೆಸಿಕೊಟ್ಟರು. ಅ

*ಎಂ.ಎಸ್. ಲಾವಣ್ಯ ಬಸವರಾಜು*





ಕವನ

## ಗಜವದನ

ಹೇರಂಭ ಗಣಪತಿಯನ್ನು ಪ್ರಾರ್ಥಿಸಿ
ವಿಶಿಷ್ಠ ದಿನವಿದು ಎಂದು ರವಿಪೂರ್ವದಲ್ಲಿ ಉದಯಿಸಿ ಮಂಗ-
ಳಂ ಭುವನೇಶ್ವರಿ ಎಂದು ಸಪ್ತಕಿರಣಗಳನ್ನು ಸಿಂಚಿಸುತ್ತಿರೆ
ಭಿನ್ನಹ ಭಗವಂತನಲಿ–ಪರಮಾತ್ಮ
ಸಂಪನ್ನ ಭರಿತನಾಗು, ದೇಶ, ನಡೆ, ನುಡಿ
ವರದಾಯಕವಾಗಿ ಸಕಲಜೀವ ಗಣಗಳು ನಿತ್ಯೋ
ತ್ಸವದ ಉತ್ಸಾಹದಿಂದ ಬಾಳುವಂತೆ ಧರ್ಮೋ
ರಕ್ಷತಿ ರಕ್ಷತಃ ಎಂಬ ಶುಭನುಡಿಗಳಿಂದ
ದವಸಧಾನ್ಯ ಸಂಪತ್ಭರಿತವಾಗಿ
ಶುಕಪಿಕಗಳಂತೆ ಜೊತೆ ಜೊತೆಯಲಿ ಒಳ್ಳೆಯ
ಭಾವನೆ, ಸಂವೇದನೆ, ಸಂತೃಪ್ತಿ
ಶಕ್ಯತೆ, ಅನುಬಂಧನೆ ಎಂಬ ಪಂಚಮಂತ್ರಗಳಿಂದ
ಯಥೋಚಿತವಾಗಿ ಕಾರ್ಯನಿರತವಾಗಿ ಅರ-
ಳುವ ಕುಸುಮದಂತೆ "ಹೇ ವಾಳಂಬಿಯನ್ನು ಸ್ವಾಗತಿಸೋಣ"
ಬೇವು ಬೆಲ್ಲ ಹಂಚಿಕೊಂಡು ಸ್ನೇಹಮಯ
ಬಾಳನ್ನು ಬದುಕುವಾಸೆ.



*ಡಾ. ಅಹಲ್ಯಾಚಿಂತಾಮಣಿ*

## ಡಾ. ರಂಗನಾಥ ಸಿಂಗಾರಿ ದೆಹಲಿ ತಾಂತ್ರಿಕ ವಿವಿಯಲ್ಲಿ ಪ್ರಾಧ್ಯಾಪಕರಾಗಿ ಆಯ್ಕೆ



ಹಿರಿಯ ತಾಂತ್ರಿಕ ಶಿಕ್ಷಣ ತಜ್ಞ, ದೆಹಲಿ ಕರ್ನಾಟಕ ಸಂಘದ ಸದಸ್ಯರಾಗಿರುವ ಡಾ. ರಂಗನಾಥ ಮುತ್ತಣ್ಣ ಸಿಂಗಾರಿ ಅವರು ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯದ ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಆಯ್ಕೆಯಾಗಿದ್ದಾರೆ. ಕಳೆದೆರಡು ವರ್ಷಗಳಿಂದ ಅವರು ಪ್ರೊಡಕ್ಷನ್ ಮತ್ತು ಇಂಡಸ್ಟ್ರೀಯಲ್ ಇಂಜಿನೀಯರಿಂಗ್ ವಿಭಾಗದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಕೇಂದ್ರ ಲೋಕಸೇವಾ ಆಯೋಗದ ಮುಖಾಂತರ 1998ರಲ್ಲಿ ಅವರು ದೆಹಲಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿಕೊಂಡಿದ್ದರು. ಕರ್ನಾಟಕದ ಬೀಳಗಿ ತಾಲೂಕಿನ ಸುನಗ ಗ್ರಾಮದವರಾದ ಡಾ. ಸಿಂಗಾರಿ ಅವರು ವಿಜಯಪುರದ ದರ್ಬಾರ ಶಾಲೆಯಲ್ಲಿ ಕಲಿತು, ಬಾಗಲಕೋಟೆಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಇ. ಪದವಿಯನ್ನು ಪಡೆದರು. ನಂತರ ದೆಹಲಿ ವಿಶ್ವವಿದ್ಯಾಲಯದಿಂದ ಎಂ.ಟೆಕ್. ಮತ್ತು ಪಿಎಚ್‌ಡಿ ಪದವಿಗಳನ್ನು ಪಡೆದರು. ಸುಮಾರು ಎಂಭತ್ತಕ್ಕೂ ಹೆಚ್ಚು ತಾಂತ್ರಿಕ ಸಂಶೋಧನಾ ಲೇಖನಗಳನ್ನು ದೇಶವಿದೇಶದ ನಿಯತಕಾಲಿಕಗಳಲ್ಲಿ ಬರೆದಿರುವ ಇವರು ಸಂಶೋಧನಾ ಪುಸ್ತಕವೊಂದನ್ನು ಸಹಾ ಪ್ರಕಟಿಸಿರುತ್ತಾರೆ. ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿರುವ ಅವರು ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಎಡ್ವಾನ್ಸ್‌ಡ್ ಪ್ರೊಡಕ್ಷನ್ ಎಂಡ್ ಇಂಡಸ್ಟ್ರೀಯಲ್ ಇಂಜಿನಿಯರಿಂಗ್ ಎಂಬ ಜರ್ನಲ್ ಒಂದನ್ನು ಆರಂಭಿಸಿ ಅದರ ಮುಖ್ಯ ಸಂಪಾದಕರಾಗಿದ್ದಾರೆ. ಸುಮಾರು ಎರಡು ದಶಕಗಳಿಂದ ದೆಹಲಿಯಲ್ಲಿ ನೆಲೆಸಿರುವ ಡಾ. ಸಿಂಗಾರಿ ಅವರು ತಮ್ಮ ಬಿಡುವಿನ ವೇಳೆಯಲ್ಲಿ ಕನ್ನಡ ನುಡಿ ಮತ್ತು ನಾಡಿಗಾಗಿ ತಮ್ಮ ಸೇವೆ ಸಲ್ಲಿಸಲು ತೊಡಗಿಸಿಕೊಂಡಿರುತ್ತಾರೆ. ಅ

***ಡಾ. ಎಸ್.ಎಲ್. ಭಂಡಾರಕರ್***



## ಡಾ. ಎಂ.ಎಸ್. ಶಶಿಕುಮಾರ್ ಅವರಿಗೆ ಪದೋನ್ನತಿ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಕೇಂದ್ರ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ಸೈನ್‌ಟಿಸ್ಟ್ 'ಡಿ' ಹುದ್ದಗೆ ಪದೋನ್ನತಿ ಹೊಂದಿದ್ದಾರೆ.

ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಅ

***ಅಭಿಮತ ವರದಿ***

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Aug-2017, Vol. No.27, Issue No.11, Price Rs.1/- RNI Regn. No. 53405/91, DL-SW-1/4016/16-18
Printout Date : Aug 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

